ಸಂಪುಟ: 01 ಸಂಚಿಕೆ: 58 ಪುಟ: 04 ಬೆಲೆ: 02 ಶನಿವಾರ ಆಗಸ್ಟ್ 08 2026 ಮೊ: 7411699198/7406928404

# ಅಜಾತ ಶತ್ರು

ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ

ಜನರ ನುಡಿ.... ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue: 58 Pages:04 Price:02 SATURDAY AUGUST 08 2026 RNI NO: KNKAN/26/A4008 E-mail:ajathashathru2026@gmail.com

# ಕೊಪ್ಪಳ ಜಿಲ್ಲೆಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರು, ಸದಸ್ಯರ ಭೇಟಿ

# ವಸತಿ ನಿಲಯ, ಶಾಲೆ, ಪೊಲೀಸ್ ಠಾಣೆ, ಆಸ್ಪತ್ರೆಗಳ ಪರಿಶೀಲನೆ

## ನ್ಯೂನತೆಗಳನ್ನು ತ್ವರಿತವಾಗಿ ಸರಿಪಡಿಸಿ ವರದಿ ಸಲ್ಲಿಸಲು ನಿರ್ದೇಶನ

## ಮಕ್ಕಳ ಹಕ್ಕುಗಳ ರಕ್ಷಣೆಗೆ ಆದ್ಯತೆ ನೀಡಿ: ಸಂತೋಷ ಕುಮಾರ ಸೂಚನೆ

**ಕೊಪ್ಪಳ: ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರಾದ ಸಂತೋಷ ಕುಮಾರ ಹಾಗೂ ಸದಸ್ಯರಾದ ಸತ್ಯನಾರಾಯಣ ಶೆಟ್ಟಿ ಅವರು ಆಗಸ್ಟ್ 5ರಂದು ಕೊಪ್ಪಳ ಜಿಲ್ಲೆಗೆ ಭೇಟಿ ನೀಡಿ, ವಿವಿಧ ಮಕ್ಕಳ ವಸತಿ ನಿಲಯಗಳು, ಶಾಲೆಗಳು, ಪೊಲೀಸ್ ಠಾಣೆಗಳು ಹಾಗೂ ಆಸ್ಪತ್ರೆಗಳಲ್ಲಿ ಮಕ್ಕಳಿಗೆ ಕಲ್ಪಿಸಲಾಗಿರುವ ಸೌಲಭ್ಯಗಳ ಕುರಿತು ಸಮಗ್ರ ಪರಿಶೀಲನೆ ನಡೆಸಿದರು.**







ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಡಿ. ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯ, ಸಮಾಜ ಕಲ್ಯಾಣ ಇಲಾಖೆಯ ಡಾ. ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಗಣೇಶನಗರ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯ, ಹಿರೇಸಿಂದೋಗಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಗುನ್ನಾಳ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯ, ಪಿಎಂ-ಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ಗಣೇಶನಗರ) ಹಾಗೂ ಶ್ರೀಶೈಲನಗರ ಪ್ರಾಥಮಿಕ ಶಾಲೆಗಳಿಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರು ಭೇಟಿ ನೀಡಿ ಮೂಲಭೂತ ಸೌಕರ್ಯಗಳು, ಸ್ವಚ್ಛತೆ ಹಾಗೂ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ವಿತರಣೆಯ ಕುರಿತು ಪರಿಶೀಲಿಸಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭೆಯಲ್ಲಿ ಅಧಿಕಾರಿಗಳೊದಿಗೆ ಆಯೋಗದ ಅಧ್ಯಕ್ಷರಾದ ಸತೋಷ ಕುಮಾರ್ ಹಾಗೂ ಸದಸ್ಯ ನಾರಾಯಣ ಶೆಟ್ಟಿ

ಈ ಸಂದರ್ಭದಲ್ಲಿ ಮಕ್ಕಳ ರಕ್ಷಣಾ ನೀತಿ-2016 (ಪರಿಷ್ಕೃತ-2023) ಅನುಷ್ಠಾನದ ಪ್ರಗತಿಯನ್ನು ಪರಿಶೀಲಿಸಿದ ಅಧ್ಯಕ್ಷರು, ನೀತಿಯನ್ನು ಶೇ.100ರಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಅದರ ವರದಿಯನ್ನು ಆಯೋಗಕ್ಕೆ ಸಲ್ಲಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಬಳಿಕ ಕೊಪ್ಪಳ ನಗರ ಪೊಲೀಸ್ ಠಾಣೆ, ಮಹಿಳಾ ಪೊಲೀಸ್ ಠಾಣೆ, ಮಕ್ಕಳ ವಿಶೇಷ ಪೊಲೀಸ್ ಘಟಕ ಹಾಗೂ ಬೇವೂರು ಪೊಲೀಸ್ ಠಾಣೆಗಳ ಕಾರ್ಯವೈಖರಿಯನ್ನು ಪರಿಶೀಲಿಸಿದ ಅವರು, ಮಕ್ಕಳ ಸುರಕ್ಷತೆ ಕುರಿತು ನಿರಂತರ ಜಾಗೃತಿ ಕಾರ್ಯಕ್ರಮಗಳು ಹಾಗೂ "ತೆರೆದ ಮನೆ" ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಸೂಚಿಸಿದರು.

ಶಾಲೆ ಹಾಗೂ ಕಾಲೇಜುಗಳ ಆರಂಭ ಮತ್ತು ಮುಕ್ತಾಯದ ವೇಳೆಯಲ್ಲಿ ಬೀಟ್ ಸಿಬ್ಬಂದಿ ಮಕ್ಕಳ ಸುರಕ್ಷತೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

ಜಿಲ್ಲಾ ಆಸ್ಪತ್ರೆ ಹಾಗೂ ತಾಯಿ-ಮಕ್ಕಳ ಆಸ್ಪತ್ರೆಗೆ ಭೇಟಿ ನೀಡಿ ಮಕ್ಕಳ ಆರೋಗ್ಯ ಸೇವೆಗಳು, ಚಿಕಿತ್ಸೆ ಮತ್ತು ಲಭ್ಯವಿರುವ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸಿದರು. ಬಳಿಕ ಪೌಷ್ಟಿಕ ಪುನರ್ವಸತಿ ಕೇಂದ್ರಕ್ಕೆ (ಎನ್‌ಆರ್‌ಸಿ) ಭೇಟಿ ನೀಡಿ ದಾಖಲಾದ ಮಕ್ಕಳ ಆರೋಗ್ಯದ ಕುರಿತು ವೈದ್ಯರಿಂದ ಮಾಹಿತಿ ಪಡೆದರು. ಬಾಲ ಗರ್ಭಿಣಿಯರ ಪ್ರಕರಣಗಳು ಕಂಡುಬಂದಲ್ಲಿ ವಿಶೇಷ ನಿಗಾವಹಿಸಿ ಚಿಕಿತ್ಸೆ ಒದಗಿಸುವುದರೊಂದಿಗೆ ಸಂಬಂಧಿತ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಸೂಚಿಸಿದರು. ಆಸ್ಪತ್ರೆಯಲ್ಲಿ ಗರ್ಭಿಣಿಯರಿಗೆ ಬಿಸಿನೀರಿನ ವ್ಯವಸ್ಥೆ ಸಮರ್ಪಕವಾಗಿಲ್ಲದಿರುವುದನ್ನು ಗಮನಿಸಿದ ಅಧ್ಯಕ್ಷರು, ತಾಯಿ ಹಾಗೂ ಮಗುವಿನ ಅನುಕೂಲಕ್ಕಾಗಿ ಕುಡಿಯಲು ಮತ್ತು ಸ್ನಾನಕ್ಕೆ ಶೀಘ್ರವೇ ಬಿಸಿನೀರಿನ ವ್ಯವಸ್ಥೆ ಕಲ್ಪಿಸುವಂತೆ ಸೂಚಿಸಿದರು. ಅಲ್ಲದೆ ಸಾರ್ವಜನಿಕ ಶೌಚಾಲಯಗಳ ಸ್ವಚ್ಛತೆ ಕಾಪಾಡುವುದು ಹಾಗೂ ಗರ್ಭಿಣಿಯರು ಮತ್ತು ಬಾಣಂತಿಯರಿಗೆ ಸ್ವಚ್ಛ ಹಾಗೂ ಹೊಸ ಬೆಡ್‌ಶೀಟ್‌ಗಳನ್ನು ಒದಗಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

> "ಸಂಜೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾದ ಜಿಲ್ಲಾಮಟ್ಟದ ಅಧಿಕಾರಿಗಳ ಸಭೆಯಲ್ಲಿ ಭಾಗವಹಿಸಿದ ಆಯೋಗದ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರಾದ ಸಂತೋಷ ಕುಮಾರ ಹಾಗೂ ಸದಸ್ಯರಾದ ಸತ್ಯನಾರಾಯಣ ಶೆಟ್ಟಿ ಅವರು, ಪರಿಶೀಲನೆ ವೇಳೆ ಕಂಡುಬಂದ ನ್ಯೂನತೆಗಳನ್ನು ನಿರ್ಲಕ್ಷಿಸದೆ ಶೀಘ್ರದಲ್ಲಿ ಸರಿಪಡಿಸಿ ಕೈಗೊಂಡ ಕ್ರಮಗಳ ವರದಿಯನ್ನು ಆಯೋಗಕ್ಕೆ ಸಲ್ಲಿಸುವಂತೆ ನಿರ್ದೇಶನ ನೀಡಿದರು. ಜಿಲ್ಲೆಯ ಎಲ್ಲ ಇಲಾಖೆಗಳು ಮಕ್ಕಳ ಸುರಕ್ಷತೆ, ಮಕ್ಕಳ ಹಕ್ಕುಗಳ ಸಂರಕ್ಷಣೆ ಹಾಗೂ ಸಂಬಂಧಿತ ಕಾನೂನು ಮತ್ತು ನೀತಿಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಆದ್ಯತೆ ನೀಡಬೇಕು. ಜಿಲ್ಲೆಯ ವಸತಿ ನಿಲಯಗಳು, ಶಾಲೆಗಳು ಹಾಗೂ ಆಸ್ಪತ್ರೆಗಳಿಗೆ ಅಧಿಕಾರಿಗಳು ನಿಯಮಿತವಾಗಿ ಭೇಟಿ ನೀಡಿ ಪರಿಶೀಲನೆ ನಡೆಸುವ ಮೂಲಕ ಅಗತ್ಯ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು.

### ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳು

ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಜಗದೀಶ, ಸಮಾಜ ಕಲ್ಯಣ ಇಲಾಖೆ ಉಪನಿರ್ದೇಶಕರಾದ ಅಜ್ಜಪ್ಪ ಸೊಗಲದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಅಮರೇಶ ಹಾವಿನ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕರಾದ ಸೋಮಶೇಖರಗೌಡ ಪಾಟೀಲ್, ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಅಜ್ಮೀರ ಅಲಿ, ಜಿಲ್ಲಾ ಕಾರ್ಮಿಕ ಅಧಿಕಾರಿಗಳಾದ ಸುಧಾ ಗರಗ, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಸಿಂಧು ಅಂಗಡಿ, ಕೊಪ್ಪಳ ಡಿವೈಎಸ್ಪಿ ಮುತ್ತಣ್ಣ ಸವರಗೋಳ, ಹಿಂದುಳಿ ವರ್ಗಗಳ ಕಲ್ಯಾಣ ಇಲಾಖೆ ವ್ಯವಸ್ಥಾಪಕರಾದ ಮಂಜುಳಾ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ಸತ್ಯವಾಣಿ ಕಟೋಕ್ತಿ

ಅಹಂನ ಕೋಟೆ ಕಟ್ಟಿಕೊಂಡಿರುವ
ಪ್ರತಿ ಒಬ್ಬ ವ್ಯಕ್ತಿಯು ತಾನೆ ಬಲಿಷ್ಟ
ಎಂದು ತನ್ನ ಕೋಟೆಗೆ ಯಾರು
ದಾಳಿ ಮಾಡಲಾರರು ಎಂಬ
ಭ್ರಮೆಯಲ್ಲಿರುವಾಗಲೇ,ತಮ್ಮ
ಸಮಾಧಿ ತಾವೇ
ನಿರ್ಮಿಸಿಕೊಂಡಿದ್ದೇವೆ ಎಂಬ
ಸತ್ಯದ ಅರಿವು ಆಗದಿರುವುದೇ
ದುರಂತ.



ವಾಣಿ ಭಂಡಾರಿ.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ತೀರ್ಥಹಳ್ಳಿಯಲ್ಲಿ ಭೂಕುಸಿತದಿಂದ ಮರಣ ಹೊಂದಿದ ಕಕ್ಕರಗೋಳ ಗ್ರಾಮದ ಕುಟುಂಬಸ್ಥರ ಮನೆಗೆ ಸಚಿವರ ಭೇಟಿ; ಸಾಂತ್ವನ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಗುಡ್ಡ ಕುಸಿತ ದುರಂತ (ಭೂಕುಸಿತದಿಂದ) ಮರಣ ಹೊಂದಿದ ಕೊಪ್ಪಳ ಜಿಲ್ಲೆಯ ಕಕ್ಕರಗೋಳ ಗ್ರಾಮದ ಕುಟುಂಬಸ್ಥರ ಮನೆಗೆ ಸಚಿವರಾದ ಶಿವರಾಜ ತಂಗಡಗಿ ಅವರು ಆಗಸ್ಟ್ 07ರಂದು ಭೇಟಿ ನೀಡಿ, ಸಾಂತ್ವನ ಹೇಳಿದರು. ತಹಸೀಲ್ದಾರ ಶಿವಮೊಗ್ಗ ಇವರ ವಿಪತ್ತು ನಿರ್ವಹಣಾ ಖಾತೆಯಿಂದ ಪಾವತಿ ಮಾಡಲಾದ 15 ಲಕ್ಷ ರೂ. ಗಳನ್ನು ಮೃತರ ಇಬ್ಬರು ಮಕ್ಕಳಿಗೆ ಸಮಾನವಾಗಿ ಹಂಚಿಕೆ ಮಾಡಲಾಗಿದ್ದು, ಮೃತರ ಹೆಣ್ಣು ಮಕ್ಕಳಾದ ದಿವ್ಯ ಹಾಗೂ ಮಹಾಲಕ್ಷ್ಮಿ ಅವರಿಗೆ ತಹಸೀಲ್ದಾರ ಶಿವಮೊಗ್ಗ ಇವರು.**

ತಲಾ 7,50,000 ರೂ.ಗಳನ್ನು ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಿದ ರಸೀದಿಯನ್ನು ಸಚಿವರು ದಿವ್ಯ ಹಾಗೂ ಮಹಾಲಕ್ಷ್ಮಿ ಅವರಿಗೆ ಅವರ ಗಂಡಜ್ಜಿ ಗೌರಮ್ಮ ಸಮ್ಮುಖದಲ್ಲಿ ವಿತರಣೆ ಮಾಡಿದರು.

**ವಿದ್ಯಾಭ್ಯಾಸಕ್ಕೆ ಅನುಕೂಲ:** ದಿವ್ಯ ಏಳು ವರ್ಷದವಳಿದ್ದು 1ನೇ ತರಗತಿಯಲ್ಲಿ ಹಾಗೂ ಮಹಾಲಕ್ಷ್ಮಿ 9 ವರ್ಷದವಳಿದ್ದು ಮೂರನೇ ತರಗತಿಯಲ್ಲಿ ಓದುತ್ತಿದ್ದಾಳೆ. ಇವರ ಶಿಕ್ಷಣಕ್ಕೆ ಅನುಕೂಲ ಕಲ್ಪಿಸಿ ಎಂದು ಕುಟುಂಬಸ್ಥರು ಸಚಿವರಲ್ಲಿ ಮನವಿ ಮಾಡಿದರು. ಕುಟುಂಬದವರು ಒಪ್ಪಿದಲ್ಲಿ ಬಾಲಕಿಂ-



ಯರ ಬಾಲ ಮಂದಿರದಲ್ಲಿದ್ದು ಓದಲು ಎಲ್ಲ ರೀತಿಯ ಸೌಕರ್ಯ ಒದಗಿಸಿ ಕೊಡುತ್ತೇವೆ. ಕುಟುಂಬದವರು ಒಪ್ಪದಿದ್ದಲ್ಲಿ ದಿವ್ಯ ಮತ್ತು ಮಹಾಲಕ್ಷ್ಮಿ ಇಬ್ಬರಿಗೆ ತಿಂಗಳಿಗೆ ತಲಾ 4000 ರೂ ಗಳಂತೆ 3 ವರ್ಷ ಪ್ರಾಯೋಜಕತ್ವಡಿ ಇಬ್ಬರಿಗೂ ಸಹಾಯಧನಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದು ಸಚಿವರು ತಿಳಿಸಿದರು. ಮೃತ ಕುಟುಂಬದವರು ಬಡವರಾಗಿದ್ದಾರೆ. ಅವರಿಗೆ ವಾಸಿಸಲು ಮನೆ ನೀಡಬೇಕು ಎಂದು ಗ್ರಾಮಸ್ಥರು ಕೋರಿದರು. ಪಂಚಾಯಿತಿ ಅಧಿಕಾರಿಗಳಿಗೆ ಹೇಳಿ ಮನೆ ಕೊಡಿಸುವುದಾಗಿ ಸಚಿವರು ತಿಳಿಸಿದರು.

**ಗಾಯಾಳುಗಳಿಗೆ ಚಿಕಿತ್ಸಾ ವೆಚ್ಚ ಪಾವತಿ:** ತೀರ್ಥಹಳ್ಳಿಗೆ ದುಡಿಯಲು ಹೋಗಿದ್ದ ವೇಳೆ ಸಂಭವಿಸಿದ ಅವಘಡದಲ್ಲಿ ಸಿಲುಕಿ ತೀವ್ರ ಗಾಯಗೊಂಡ ಕಕ್ಕರಗೋಳದ ಹನುಮಂತ ತಂದೆ ಫಕೀರಪ್ಪ ಹಾಗೂ ಮುಕ್ಕುಂದದ ಅಮೃತ ಗಂಡ ರಾಮಣ್ಣ ಅವರು ಸಚಿವರಿಗೆ ಭೇಟಿ ಮಾಡಿ ಪರಿಹಾರ ಕೋರಿದರು. ಗಾಯಗೊಂಡವರಿಗೆ ಸಹ ನಿಯಮಾನುಸಾರ ಚಿಕಿತ್ಸಾ ವೆಚ್ಚ ಪಾವತಿಗೆ ಮತ್ತು ಇನ್ನಿತರ ಪರಿಹಾರಕ್ಕೆ ವ್ಯವಸ್ಥೆ ಮಾಡಲು ಜಿಲ್ಲಾಧಿಕಾ-ರಿಗಳಿಗೆ ಸೂಚಿಸಿದ್ದಾಗಿ ಸಚಿವರು ತಿಳಿಸಿದರು.

ಈ ವೇಳೆ ಕೊಪ್ಪಳ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ, ಕಾರಟಗಿ ತಹಸೀಲ್ದಾರರಾದ ಕುಮಾರಸ್ವಾಮಿ, ಇಓ ಲಕ್ಷ್ಮೀದೇವಿ ಯಾದವ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸಿಂಧು ಅಂಗಡಿ (ಯಲಿಗಾರ) ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಇತರೆ ಜನಪ್ರತಿನಿಧಿಗಳು, ಮೃತರ ಕುಟುಂಬಸ್ಥರು ಹಾಗೂ ಕಕ್ಕರಗೋಳ ಗ್ರಾಮಸ್ಥರು ಉಪಸ್ಥಿತರಿದ್ದರು.

ಶಿವಮೊಗ್ಗ ತಹಸೀಲ್ದಾರ ವಿಪತ್ತು ನಿರ್ವಹಣಾ ಖಾತೆಯಿಂದ ಪರಿಹಾರ: ತೀಥ-ರ್ಹಳ್ಳಿ ತಾಲೂಕಿನ ಇಂದಿರಾ ನಗರದಲ್ಲಿ ಭಾರಿ ಮಳೆಯಿಂದ ಸಂಭವಿಸಿದ ಗುಡ್ಡ ಕುಸಿತ ದುರಂತದಲ್ಲಿ ಕಾರಟಗಿ ತಾಲೂಕಿನ ಕಕ್ಕರಗೋಳ ಗ್ರಾಮದ ಒಂದೇ ಕುಟುಂಬದ 3 ಜನ ಮೃತಪಟ್ಟಿದ್ದರು. ಮೃತರ ವಾರಸುದಾರರಿಗೆ ತಲಾ 5 ಲಕ್ಷ ರೂ. ಗಳಂತೆ ಒಟ್ಟು ಪರಿಹಾರ 15 ಲಕ್ಷ ರೂ.ಗಳನ್ನು ತಹಸೀಲ್ದಾರ ಶಿವಮೊಗ್ಗ ವಿಪತ್ತು ನಿರ್ವಹಣಾ ಖಾತೆಯಿಂದ ಪರಿಹಾರ ವಿತರಣೆ ಮಾಡಲು ಶಿವಮೊಗ್ಗ ಜಿಲ್ಲಾಧಿಕಾರಿಗಳು ಆದೇಶಿಸಿದ್ದರು.

## ಎಸ್.ಎಸ್.ಎಲ್.ಸಿ & ಪಿಯುಸಿ ವಿದ್ಯಾರ್ಥಿನಿಯರಿಗೆ 'ಭವಿಷ್ಯದ ದಾರಿ' ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಕೊಪ್ಪಳ, ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಧಾರವಾಡ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕೊಪ್ಪಳ ಇವರ ಸಹಯೋಗದಲ್ಲಿ, ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ವಿದ್ಯಾರ್ಥಿನಿಯರಿಗಾಗಿ "ಭವಿಷ್ಯದ ದಾರಿ" ವೃತ್ತಿ ಮಾರ್ಗದರ್ಶನ ಕಾರ್ಯಕ್ರಮವು ಕೊಪ್ಪಳ ನಗರದ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಗುರುವಾರ (ಆ. 6ರಂದು) ಯಶಸ್ವಿಯಾಗಿ ನಡೆಯಿತು.**

ಕರ್ನಾಟಕ ಬಾಲ ವಿಕಾಸ ಅಕಾಡೆಮಿಯ ಅಧ್ಯಕ್ಷರಾದ ಅಡಿವೇಶ ಗಿರಪ್ಪ ಇಟಗಿ ಅವರು ಸಸಿಗೆ ನೀರು ಎರೆಯುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, "ಮಕ್ಕಳ ರಕ್ಷಣೆ, ಹಕ್ಕುಗಳು ಹಾಗೂ ಸುರಕ್ಷಿತ ಮತ್ತು ಅಸುರಕ್ಷಿತ ವಾತಾವರಣದ ಕುರಿತು ಪ್ರತಿಯೊಬ್ಬರೂ ಜಾಗೃತರಾಗಿರಬೇಕು. 0 ಯಿಂದ 18 ವರ್ಷದ ಮಕ್ಕಳಿಗೆ ಮೊಬೈಲ್ ಬ್ಯಾನ್ ಮಾಡುವ ಉದ್ದೇಶವನ್ನು ಸರ್ಕಾರ ಹೊಂದಿದೆ. ವಿದ್ಯಾರ್ಥಿನಿಯರು ಕೇವಲ ಅಂಕಗಳಿಗೆ ಆದ್ಯತೆ ನೀಡದೆ, ದೈಹಿಕವಾಗಿ ಕ್ರೀಡಾ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಕರೆ ನೀಡಿದರು.




ವಿವಿಧ ವಿಷಯಗಳ ಕುರಿತು ಸಂಪನ್ಮೂಲ ವ್ಯಕ್ತಿಗಳಿಂದ ಮಾರ್ಗದರ್ಶನ: ಹರೀಶ್ ಜೋಗಿ ಅವರು, ಬಾಲ್ಯ ವಿವಾಹ ತಡೆ, ಪೋಕ್ಸೋ ಕಾಯ್ದೆ, ಮಕ್ಕಳ ಸುರಕ್ಷತೆ, ಮೊಬೈಲ್ ಫೋನಿನ ದುರ್ಬಳಕೆ ಹಾಗೂ ಸೈಬರ್ ಅಪರಾಧಗಳ ಕುರಿತು ವಿದ್ಯಾರ್ಥಿನಿಯರಿಗೆ ವಿಸ್ತೃತ ಮಾಹಿತಿ ನೀಡಿದರು.

ಸಿದ್ದಪ್ಪ ಕುರಿ ಅವರು, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಬರೀ ಸರ್ಕಾರಿ ಉದ್ಯೋಗಕ್ಕೆ ಅಂಟಿಕೊಳ್ಳದೆ, ಖಾಸಗಿ ವಲಯದಲ್ಲೂ ಅವಕಾಶಗಳನ್ನು ಹುಡುಕಬೇಕು. ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಬಂಡವಾಳ ಸಹಿತ ಅಥವಾ ರಹಿತವಾಗಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಕೈಗೊಳ್ಳಬಹುದಾದ ಉದ್ಯೋಗಗಳ ಕುರಿತು ಸವಿಸ್ತಾರವಾಗಿ ವಿವರಿಸಿದರು.

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಪ್ರಕಾಶ್ ಕಡಗದ ಅವರು ಮಕ್ಕಳ ಹಕ್ಕುಗಳು, ಶಿಕ್ಷಣ ಮತ್ತು ಸಬಲೀಕರಣದ ಕು-ರಿತು ಮಾತನಾಡಿ, "ಯಾವುದೇ ದುರಭ್ಯಾಸ ಅಥವಾ ವ್ಯಸನಗಳಿಗೆ ಒಳಗಾಗದೆ ಶಿಕ್ಷಣವನ್ನು ಪೂರ್ಣಗೊಳಿಸಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು," ಎಂದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಅಮರೇಶ್ ಹಾವಿನ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, "ವಿದ್ಯಾರ್ಥಿ ದೆಸೆಯಲ್ಲಿ ಗಮನ ಬೇರೆಡೆಗೆ ಹರಿಯದಂತೆ, ಪ್ರೀತಿ-ಪ್ರೇಮದಂತಹ ವಿಷಯಗಳಿಂದ ದೂರವಿದ್ದು, ದೃಢ ಸಂಕಲ್ಪದೊಂದಿಗೆ ಗುರಿ ಸಾಧಿಸಬೇಕು. ಉತ್ತಮ ಭವಿಷ್ಯಕ್ಕಾಗಿ ಶಿಕ್ಷಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಬೇಕು ಎಂದು ಕಿವಿಮಾತು ಹೇಳಿದರು.

ಸನ್ಮಾನ: ಕಾರ್ಯಕ್ರಮದಲ್ಲಿ ಕರ್ನಾಟಕ ಬಾಲ ವಿಕಾಸ ಅಕಾಡೆಮಿಯ ಅಧ್ಯಕ್ಷರಾದಅಡಿವೇಶ ಗಿರಪ್ಪ ಇಟಗಿ ಹಾಗೂ ಯೋಜನಾಧಿಕಾರಿಗಳಾದ ವಿರೂಪಾಕ್ಷಿಗೌಡ ವಿ. ಪಾಟೀಲ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳಾದ ಅನ್ನಪೂರ್ಣ ಕುಬಕಡ್ಡಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ರೋಹಿಣಿ ಕೊಟಗಾರ್, ಬಾಲ ವಿಕಾಸ ಅಕಾಡೆಮಿ ಸದಸ್ಯರಾದ ಹರ್ಷವರ್ಧನ್, ಮಹಿಳಾ ಸಬಲೀಕರಣ ಘಟಕದ ಸಿಬ್ಬಂದಿಗಳಾದ ಶ್ರೀದೇವಿ, ಫಾತಿಮಾ, ಶೃತಿ, ಪುನೀತ್, ಪ್ರಮೋದ ಕುಮಾರ, ಅಕ್ಕಪಡೆಯ ಸಿಬ್ಬಂದಿಗಳು, ಕಾಲೇಜಿನ ಬೋಧಕ ವೃಂದ ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ಆ.10ರಂದು ಚಿತ್ರದುರ್ಗದಲ್ಲಿ ಕೆಆರ್ ಎಸ್ ಪಕ್ಷದ 7ನೇ ಸಂಸ್ಥಾಪನಾ ದಿನಾಚರಣೆ

ಅ.ಶ. ಸುದ್ದಿ ಚಿತ್ರದುರ್ಗ

**ಚಿತ್ರದುರ್ಗ: ಕರ್ನಾಟಕ ರಾಷ್ಟ್ರ ಸಮಿತಿ (ಕೆ ಆರ್ ಎಸ್) ಪಕ್ಷದ 7ನೇ ಸಂಸ್ಥಾಪನಾ ದಿನಾಚರಣೆ ಹಾಗೂ ರಾಜ್ಯಮಟ್ಟದ ಬೃಹತ್ ಸಮಾವೇಶವು ಆ.10ರಂದು ಸೋಮವಾರದಂದು ಚಿತ್ರದುರ್ಗದ ಮುರುಘರಾಜೇಂದ್ರ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ಸಮಿತಿಯ ಜಿಲ್ಲಾ ಅಧ್ಯಕ್ಷ ಗಣೇಶ್ ಅಮೃತ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸ್ವಚ್ಛ, ಪ್ರಾಮಾಣಿಕ ಹಾಗೂ ಜನಪರ ರಾಜಕಾರಣದ ಆಶಯದೊಂದಿಗೆ ಮುನ್ನಡೆಯುತ್ತಿರುವ ಕೆ ಆರ್ ಎಸ್ ಪಕ್ಷವು ತನ್ನ ಏಳು ವರ್ಷಗಳ ಹೋರಾಟದ ಪಯಣವನ್ನು ಸ್ಮರಿಸುವುದರ ಜತೆಗೆ, ಮುಂಬರುವ ಚುನಾವಣೆಗಳಿಗೆ ಪಕ್ಷವನ್ನು ಮತ್ತಷ್ಟು ಸಜ್ಜುಗೊಳಿಸುವ ಉದ್ದೇಶದಿಂದ ಸಮಾವೇಶ ಆಯೋಜಿಸಿದೆ.**

ಪಕ್ಷದ ಸಂಸ್ಥಾಪಕ ಹಾಗೂ ಗೌರವಾಧ್ಯಕ್ಷ ರವಿ ಕೃಷ್ಣಾರೆಡ್ಡಿ ಅವರು ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ರಾಜ್ಯದ ವಿವಿಧ ಭಾಗಗಳಿಂದ ಪಕ್ಷದ ಸದಸ್ಯರು, ಪದಾಧಿಕಾರಿಗಳು ಹಾಗೂ ಬೆಂಬಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ. 2019ರ ಆ.10ರಂದು ರವಿ ಕೃಷ್ಣಾರೆಡ್ಡಿ ಅವರ ನೇತೃತ್ವದಲ್ಲಿ ಸ್ಥಾಪನೆಯಾದ ಕೆ ಆರ್ ಎಸ್ ಪಕ್ಷವು ಹಣ, ಹೆಂಡ ಹಾಗೂ ಆಮಿಷಗಳ ರಾಜಕಾರಣಕ್ಕೆ ಪರ್ಯಾಯವಾಗಿ ಸಿದ್ಧಾಂತಾಧಾರಿತ, ಪಾರದರ್ಶಕ ಹಾಗೂ ಸಾಮಾನ್ಯ ಜನರೇ ನಡೆಸುವ ರಾಜಕೀಯ ವ್ಯವಸ್ಥೆ ನಿರ್ಮಿಸುವ ಗುರಿಯೊಂದಿಗೆ ಕಾರ್ಯನಿರ್ವಹಿಸುತ್ತಿದೆ. ರಾಜಕೀಯ ಕುಟುಂಬಗಳ ಪ್ರಭಾವದಿಂದ ರಾಜ್ಯವನ್ನು ಮುಕ್ತಗೊಳಿಸಿ ಸಾಮಾನ್ಯ ನಾಗರಿಕರು ಮತ್ತು ಯುವಜನರು ರಾಜಕೀಯದ ಮುಂಚೂಣಿಗೆ ಬರಬೇಕು ಎಂಬುದು ಪಕ್ಷದ ಪ್ರಮುಖ ಧ್ಯೇಯವಾಗಿದೆ ಎಂದರು.

ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರಮುಕ್ತ



ಹಾಗೂ ಪಾರದರ್ಶಕ ಆಡಳಿತ ಜಾರಿಯಾಗಬೇಕು. ಲಂಚ, ಮಧ್ಯವರ್ತಿ ಅಥವಾ ರಾಜಕೀಯ ಪ್ರಭಾವವಿಲ್ಲದೆ ಜನರಿಗೆ ನಿಗದಿತ ಸಮಯದಲ್ಲಿ ಸೇವೆ ಹಾಗೂ ನ್ಯಾಯ ದೊರೆಯಬೇಕು ಎಂಬುದು ಪಕ್ಷದ ನಿಲುವಾಗಿದೆ. ಅಲ್ಲದೆ, ಸರ್ಕಾರದಲ್ಲಿ ಖಾಲಿ ಇರುವ ಲಕ್ಷಾಂತರ ಹುದ್ದೆಗಳನ್ನು ಪಾರದರ್ಶಕವಾಗಿ ತಕ್ಷಣ ಭರ್ತಿ ಮಾಡಬೇಕು, ಕೃಷಿ ಕ್ಷೇತ್ರದಲ್ಲಿ ವೈಜ್ಞಾನಿಕ ಬೆಳೆ ಯೋಜನೆ, ನ್ಯಾಯಸಮ್ಮತ ಬೆಲೆ ನೀತಿ, ರೈತರಿಗೆ ಖಚಿತ ಮಾರುಕಟ್ಟೆ ಹಾಗೂ ಲಾಭದಾಯಕ ಬೆಂಬಲ ಬೆಲೆ ಒದಗಿಸಬೇಕು ಎಂದು ಪಕ್ಷ ಒತ್ತಾಯಿಸುತ್ತಿದೆ ಎಂದರು. ಪಕ್ಷ ಸ್ಥಾಪನೆಯಾದಾಗಿನಿಂದ ವಿವಿಧ ಚುನಾವಣೆಗಳಲ್ಲಿ ನಿರಂತರವಾಗಿ ಸ್ಪರ್ಧಿಸುತ್ತಿದ್ದು, 2023ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಯಾವುದೇ ಹಣ ಅಥವಾ ಆಮಿಷಗಳನ್ನು ಬಳಸದೆ 195 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು.

2024ರ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಎಲ್ಲ 28 ಕ್ಷೇತ್ರಗಳಲ್ಲಿಯೂ ಸ್ಪರ್ಧಿಸಿ ಸ್ವಚ್ಛ ರಾಜಕಾರಣದ ಬದ್ಧತೆಯನ್ನು ಪ್ರದರ್ಶಿಸಿತ್ತು. ಮುಂಬರುವ ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಬೃಹತ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಚುನಾವಣೆಗಳಲ್ಲಿಯೂ ಸಂಪೂರ್ಣ ಶಕ್ತಿಯೊಂದಿಗೆ ಸ್ಪರ್ಧಿಸಲು ಪಕ್ಷ ಸಜ್ಜಾಗಿದೆ ಎಂದು ತಿಳಿಸಿದರು. ?100 ಹಾಗೂ ?1,000 ದೇಣಿಗೆ ಆಧಾರಿತ ಸದಸ್ಯತ್ವದ ಮೂಲಕ 67 ಸಾವಿರಕ್ಕೂ ಅಧಿಕ ನೋಂದಾಯಿತ ಸದಸ್ಯರನ್ನು ಹೊಂದಿರುವ ಏಖಖ ಪಕ್ಷವು ಜನರ ಸಣ್ಣ ಪ್ರಮಾಣದ ದೇಣಿಗೆಯ (ಕ್ರೌಡ್‌ಫಂಡಿಂಗ್) ಮೂಲಕ ಸಂಘಟನೆಯನ್ನು ಬೆಳೆಸಿಕೊಂಡಿದೆ. ಕಳೆದ ಏಳು ವರ್ಷಗಳ ಹೋರಾಟಕ್ಕೆ ನಾಡಿನ ಜನತೆಯೇ ಪ್ರಮುಖ ಶಕ್ತಿಯಾಗಿದ್ದಾರೆ. ಹೀಗಾಗಿ ರಾಜ್ಯದ ಯುವಜನರು, ರೈತರು, ಕಾರ್ಮಿಕರು, ಮಹಿಳೆಯರು, ಪ್ರಜ್ಞಾವಂತ ನಾಗರಿಕರು ಹಾಗೂ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆ.10ರಂದು ಚಿತ್ರದುರ್ಗದ ಮುರುಘರಾಜೇಂದ್ರ ಕ್ರೀಡಾಂಗಣಕ್ಕೆ ಆಗಮಿಸಿ ರಾಜ್ಯಮಟ್ಟದ ಬೃಹತ್ ಸಮಾವೇಶವನ್ನು ಯಶಸ್ವಿಗೊಳಿಸಬೇಕು ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಕೊಪ್ಪಳ ಜಿಲ್ಲಾ ಅಧ್ಯಕ್ಷ ಗಣೇಶ್ ಅಮೃತ್ ಮನವಿ ಮಾಡಿದ್ದಾರೆ.

## ಕೊಪ್ಪಳ ಜಿಲ್ಲೆಗೆ ಉಸ್ತುವಾರಿ ಸಚಿವರನ್ನಾಗಿ ರಾಯರಡ್ಡಿಗೆ ನೀಡುವಂತೆ ಮ್ಯಾಗಳಮನಿ ಆಗ್ರಹ

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ಕೊಪ್ಪಳ ಜಿಲ್ಲೆಯ ಯಲಬುರ್ಗಾ ಶಾಸಕ ಬಸವರಾಜ ರಾಯರಡ್ಡಿಯವರ ಹಿರಿತನ ಹಾಗೂ ಅನುಭವಿ ಇರುವ ಇವರಿಗೆ ಸಚಿವ ಸ್ಥಾನ ನೀಡಿದ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಹೈಕಮಾಂಡ್ ಗೆ ಜಿಲ್ಲೆಯ ಜನತೆಯ ಪರವಾಗಿ ಸರ್ವಾಂಗೀಣ ಅಭಿವೃದ್ಧಿ ಹೋರಾಟ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಮ್ಯಾಗಳಮನಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.**



ಶಿವರಾಜ್ ತಂಗಡಗಿ ಎಷ್ಟು ಬಾರಿ ಗೆಲವು ಸಾಧಿಸಿದ್ದಾರೋ ಅಷ್ಟು ಬಾರಿ ಸಚಿವರಾಗಿದ್ದಾರೆ. ಬಾಬಾ ಸಾಹೇಬರು ನೀಡಿದ ಮೀಸಲಾತಿ ನೀತಿಯಿಂದ ಇಂತಹ ಅವಕಾಶ ಸಿಕ್ಕರೂ ತಮ್ಮ ಕ್ಷೇತ್ರದ ಚಿಕ್ಕಜಂತಗಲ್ ಗ್ರಾಮದ ದಲಿತ ಮಹಿಳೆಯರು ಬಯಲು ಶೌಚ ಅವಲಂಬನೆಯಾಗಿರುವ ಘಟನೆ ಮಾಧ್ಯಮಗಳಲ್ಲಿ ವರದಿಯಾಗಿದೆ. ಕಾರಟಗಿ ತಾಲೂಕು ಆಗಿದ್ದರೂ ಪದವಿ ಕಾಲೇಜ್ ಇರುವುದಿಲ್ಲ ಬಾಲಕಿಯರು ಮತ್ತು ಬಾಲಕರು ಉನ್ನತ ಶಿಕ್ಷಣ ಪಡೆಯಲು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಅವರ ಕ್ಷೇತ್ರದಲ್ಲಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಸೇರಿದಂತೆ ಮೂಲ ಸೌಕರ್ಯ ಕೊರತೆಯಿಂದ ಶಿಕ್ಷಣ ಕುಂಠಿತವಾಗುತ್ತಿದೆ. ಅವರ ಕ್ಷೇತ್ರದ ರಸ್ತೆಗಳು ಹದಗೆಟ್ಟಿವೆ, ಹೀಗಿರುವಾಗ ಬೇರೆ ಕ್ಷೇತ್ರದ ಬಗ್ಗೆ ಯಾವುದೇ ಅಭಿವೃದ್ಧಿ ಮಾಡಲು ಅವರಿಂದ ಸಾಧ್ಯವಾಗಿಲ್ಲ. ಅವರಿಗೆ ಉಸ್ತುವಾರಿ ನೀಡಿದರೆ ತಮ್ಮ ಪಕ್ಷದ ವರ್ಚಸ್ಸಿಗೆ ತೊಂದರೆಯಾಗಲಿದೆ. ಮುಂಬರುವ ಚುನಾವಣೆಯ ಮೇಲೆ ದುಷ್ಪರಿಣಾಮ ಬಿರಲಿದೆ. ಅವರಿಗೆ ಉಸ್ತುವಾರಿ ನೀಡಲೇಬೇಕೆಂದರೆ ಪಕ್ಕದ ಜಿಲ್ಲೆಯ ಉಸ್ತುವಾರಿಯಾಗಿ ನೇಮಕ ಮಾಡಬೇಕು. ಬಸವರಾಜ ರಾಯರಡ್ಡಿ ತಮ್ಮ ಅಧಿಕಾರ ಬಳಸಿಕೊಂಡು ನವೋದಯ ಶಾಲೆ, ಮೊರಾರ್ಜಿ ಶಾಲೆ, ವೈದ್ಯಕೀಯ ಕಾಲೇಜು, ಕಿನ್ನಾಳ ಗೊಂಬೆ ತಯಾರಿಸು ಕಾರ್ಖಾನೆ, ಶಾಲೆ ಕಾಲೇಜ್ ಹಾಗೂ ರಸ್ತೆಗಳನ್ನು ಅಭಿವೃದ್ಧಿ ಪಡಿಸಿದ್ದಾರೆ ಅವರಿಗೆ ಕೊಪ್ಪಳ ಜಿಲ್ಲೆಯ ಉಸ್ತುವಾರಿ ನೀಡಿದರೆ ಜಿಲ್ಲೆ ಅಭಿವೃದ್ಧಿಪಡಿಸುತ್ತಾರೆ ಎನ್ನುವ ಭರವಸೆ ಜಿಲ್ಲೆಯ ಜನತೆಯದಾಗಿದ್ದು ರಾಯರಡ್ಡಿಯವರಿಗೆ ಜಿಲ್ಲಾ ಉಸ್ತುವಾರಿ ನೀಡಬೇಕೆಂದು ಮ್ಯಾಗಳಮನಿ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರನ್ನು ಪ್ರಕಟಣೆಯ ಮೂಲಕ ಮನವಿ ಮಾಡಿ ಆಗ್ರಹಿಸಿದ್ದಾರೆ.

## ಗಂಗಾಮತ ಸಮಾಜಕ್ಕೆ ಸಚಿವ ಸ್ಥಾನ ಇಲ್ಲದಿದ್ದರೆ ಕಾಂಗ್ರೆಸ್‌ಗೆ ತಕ್ಕ ಪಾಠ : ರಾಜ್ಯಾದ್ಯಂತ ಹೋರಾಟದ ಎಚ್ಚರಿಕೆ

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ಗಂಗಾಮತ ಸಮಾಜದ ಏಕೈಕ ಶಾಸಕರಾದ ಮಂಕಾಳ ವೈದ್ಯ ಹಾಗೂ ವಿಧಾನ ಪರಿಷತ್ ಸದಸ್ಯ ತಿಪ್ಪಣ್ಣ ಕಮಕನೂರು ಅವರಲ್ಲಿ ಒಬ್ಬರಿಗೆ ಸಚಿವ ಸ್ಥಾನ ನೀಡುವುದಾಗಿ ಭರವಸೆ ನೀಡಿದ್ದರೂ, ಕೊನೆಯ ಕ್ಷಣದಲ್ಲಿ ಸಚಿವ ಸಂಪುಟದಲ್ಲಿ ಅವಕಾಶ ನೀಡದೇ ಇರುವುದು ಹಿಂದುಳಿದ ಗಂಗಾಮತ ಸಮಾಜಕ್ಕೆ ಮಾಡಿರುವ ಅನ್ಯಾಯ ಹಾಗೂ ಅಗೌರವವಾಗಿದೆ ಎಂದು ಗಂಗಾವತಿ ತಾಲೂಕು ಗಂಗಾಮತಸ್ಥರ ಸಂಘದ ಜಿಲ್ಲಾ ಗೌರವಾಧ್ಯಕ್ಷ ರಾಜಶೇಖರ್ ಮುಷ್ಟೂರು ಹಾಗೂ ತಾಲೂಕು ಅಧ್ಯಕ್ಷ ಹನುಮೇಶ್ ಬಟಾರಿ**




ಆಕ್ರೋಶ ವ್ಯಕ್ತ ಪಡಿಸಿದರು.

ಅವರು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ರಾಜ್ಯದಲ್ಲಿ ಗಂಗಾಮತ ಸಮಾಜವು ಸುಮಾರು 60 ಲಕ್ಷ ಜನಸಂಖ್ಯೆಯನ್ನು ಹೊಂದಿದ್ದು, ಸಮಾಜಕ್ಕೆ ಸಚಿವ ಸಂಪುಟದಲ್ಲಿ ಸೂಕ್ತ ಪ್ರಾತಿನಿಧ್ಯ ಸಿಗಬೇಕೆಂಬುದು ಬಹುಕಾಲದ ಬೇಡಿಕೆಯಾಗಿದೆ ಎಂದು ಹೇಳಿದರು. ಮಂಕಾಳ ವೈದ್ಯ ಅಥವಾ ತಿಪ್ಪಣ್ಣ ಕಮಕನೂರು ಅವರಲ್ಲಿ ಒಬ್ಬರಿಗೆ ಸಚಿವ ಸ್ಥಾನ ನೀಡದಿದ್ದಲ್ಲಿ, 2028ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಲಾಗುವುದು ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಇದೇ ವೇಳೆ, ಮುಂದಿನ ದಿನಗಳಲ್ಲಿ ಶ್ರೀ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿಗಳ ನೇತೃತ್ವದಲ್ಲಿ ರಾಜ್ಯಾದ್ಯಂತ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ ಹೊಸಳ್ಳಿ ಮರಿಯಪ್ಪ, ಹನುಮೇಶಪ್ಪ, ಆನೆಗುಂದಿ ವೆಂಕಟೇಶ್ ಪರಸಪ್ಪ

## ಮಹರ್ಷಿ ವಾಲ್ಮೀಕಿ ವೃತದಲ್ಲಿ ಮೂರ್ತಿ ಪ್ರತಿಷ್ಠಾಪನೆ ಮಾಡುವಂತೆ :ವಾಲ್ಮೀಕಿ ಸಮಾಜದಿಂದ ಸಚಿವ ರಾಯರಡ್ಡಿಗೆ ಮನವಿ

ಅ.ಶ. ಸುದ್ದಿ ಕುಕನೂರು

**ಕುಕನೂರು: ಸ್ಥಳೀಯ ಪಟ್ಟಣ ಪಂಚಾಯತಿ ಹತ್ತಿರದಲ್ಲಿರುವ ಮಹರ್ಷಿ ವಾಲ್ಮೀಕಿ ವೃತ್ತದ ಬಳಿ ವಾಲ್ಮೀಕಿಯವರ ಮೂರ್ತಿ ಪ್ರತಿಷ್ಠಾಪನೆ ಮಾಡುವಂತೆ ಸಮಾಜದ ಮುಖಂಡರು ಸಚಿವ ಬಸವರಾಜ ರಾಯರಡ್ಡಿಯವರಿಗೆ ಮನವಿ ಮಾಡಿದರು.**

ಗುರುವಾರದಂದು ಸಚಿವ ಬಸವರಾಜ ರಾಯರಡ್ಡಿವರು ನೂತನ ಸಚಿವರಾದ ನಂತರ ಮೊದಲ ಬಾರಿಗೆ ತವರು ಕ್ಷೇತ್ರ ಯಲಬುರ್ಗಾ ತಾಲ್ಲೂಕಿನ ಬರ ವೀಕ್ಷಣೆಗೆ ಆಗಮಿಸಿದ್ದರಿಂದ ಅವರಿಗೆ ವಾಲ್ಮೀಕಿ ಸಮಾಜದ ವತಿಯಿಂದ ಸನ್ಮಾನಿಸಿದರು. ನಂತರದಲ್ಲಿ ಸಮಾಜದ ಅಧ್ಯಕ್ಷ ರಾಮಣ್ಣ



ಮುಂದಲಮನಿ ಸೇರಿದಂತೆ ಮುಖಂಡರು ಸಚಿವರೊಂದಿಗೆ ಮಾತನಾಡಿ 2010ರಿಂದ ಪಟ್ಟಣ ಪಂಚಾಯತಿ ಪಕ್ಕದಲ್ಲಿ ವಾಲ್ಮೀಕಿ ವೃತ್ತವಿದ್ದು, ವೃತ್ತದಲ್ಲಿ ನಾಮ ಫಲಕ ಇರುವ ಜಾಗೆಯಲ್ಲಿ ಮಹರ್ಷಿಗಳ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲು ಸಮಾಜ ಒಪ್ಪಿಗೆ ಸೂಚಿಸಿ, ಅದಕ್ಕಾಗಿ ಸಮಾಜದ ವತಿಯಿಂದ ಹಣವನ್ನು ಸಂಗ್ರಹಿಸಿದ್ದು, ಈಗ ಪ್ರತಿಷ್ಠಾಪನೆಗೆ ಅಣಿಯಾಗುತ್ತಿರುವ ಬಸವೇಶ್ವರ ಪುತ್ಥಳಿ ಪಕ್ಕದಲ್ಲಿಯೇ ವಾಲ್ಮೀಕಿ ವೃತ್ತವಿರುವದರಿಂದ ವಾಲ್ಮೀಕಿಯವರ ಮೂರ್ತಿಯನ್ನು ಅಲ್ಲಿ ಪ್ರತಿಷ್ಠಾಪನೆ ಮಾಡುತ್ತೇವೆ ಎಂದು ಸಚಿವರಿಗೆ ಮನವಿ ಮಾಡಿದರು.

ಈ ಸಚಿವ ರಾಯರಡ್ಡಿಯವರು ಈ ಸ್ಥಳದಲ್ಲಿ ಬಿಟ್ಟು ಬೇರೆ ಎಲ್ಲಿಯಾದರು ಸ್ಥಳ ಗುರುತಿಸಿ ಕೊಡಿ, ಅಲ್ಲಿ ನಿರ್ಮಾಣ ಮಾಡಲು ಅನುದಾನ ಕೊಡಿಸುವೆ ಎಂದರು. ಅದಕ್ಕೆ ಒಪ್ಪದ ಸಮಾಜದ ಮುಖಂಡರು ಪಟ್ಟು ಹಿಡಿದು ನೀವು ಅನುದಾನ ನೀಡಿದಿದ್ದರೂ ಪರವಾಗಿಲ್ಲಾ, ಸಮಾಜದ ವತಿಯಿಂದ ಮೂರ್ತಿ ಪ್ರತಿಷ್ಠಾಪನೆ ಮಾಡುತ್ತೇವೆ ಎಂದು ಸಚಿವರಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ರತ್ನಾಕರ್ ತಳವಾರ, ರಾಮಣ್ಣ ಕಲ್ಲಣ್ಣವರ್, ಸಂಜೀವಪ್ಪ ಸಂಗಟಿ, ಮುತ್ತು ವಾಲ್ಮೀಕಿ, ಸುಭಾಸ ಪೂಜಾರ, ಶ್ರೀಕಾಂತ ಬಳಿಗಿ, ಕನಕಪ್ಪ ಬ್ಯಾಡರ್, ಗಂಗಾಧರ ನಾರಾಯಣಿ, ಭರಮಪ್ಪ ತಳವಾರ, ಮಂಗಳೇಶ ಮಂಗಳೂರು, ಸುಭಾಸ ಪೂಜಾರ, ಸಿದ್ದು ವಾಲ್ಮೀಕಿ, ಎಚ್. ಕೆ ಹೈತಾಪೂರ, ಕರಿಯಪ್ಪ ಅಡವಿಹಳ್ಳಿ, ಯಲ್ಲಪ್ಪ ಮುಂದಲಮನಿ, ರಾಮಣ್ಣ ಯಡ್ದೋಣಿ, ಹನುಮಪ್ಪ ಮರಡಿ, ಯಮನೂರಪ್ಪ ತಳವಾರ, ಶಿವಪ್ಪ ತಳವಾರ, ಬಸವರಾಜ, ಸುರೇಶ ಸೇರಿದಂತೆ ಸಮಾಜದ ಹಿರಿಯರು, ಯುವಕರು, ಮುಖಂಡರು ಇದ್ದರು.

## ಯುವನಿಧಿ ಯೋಜನೆಗೆ ಅರ್ಜಿ ಸಲ್ಲಿಕೆಗೆ ಅಂತಿಮ ದಿನಾಂಕವಿಲ್ಲ: ಅರ್ಹ ನಿರುದ್ಯೋಗಿಗಳಿಗೆ ಅವಕಾಶ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯುವನಿಧಿ ಯೋಜನೆಗೆ ಅರ್ಜಿ ಸಲ್ಲಿಸಲು ಯಾವುದೇ ಅಂತಿಮ ದಿನಾಂಕ ನಿಗದಿಪಡಿಸಿಲ್ಲ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ಅವರು ತಿಳಿಸಿದ್ದಾರೆ.**

ಯುವನಿಧಿ ಯೋಜನೆಯ ನೋಂದಣಿ ಪ್ರಕ್ರಿಯೆಯು ಸೇವಾ ಸಿಂಧು ಪೋರ್ಟಲ್‌ನಲ್ಲಿ ನಿರಂತರವಾಗಿ ಚಾಲನೆಯಲ್ಲಿದ್ದು, 2023ರಿಂದ ಇಲ್ಲಿಯವರೆಗೆ ಪದವಿ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮಾ ತೇರ್ಗಡೆಯಾಗಿ ಇನ್ನೂ ಅರ್ಜಿ ಸಲ್ಲಿಸದ ಅರ್ಹ ನಿರುದ್ಯೋಗಿ ಅಭ್ಯರ್ಥಿಗಳು ಸೇವಾ ಸಿಂಧು ಪೋರ್ಟ್ಲ್ ವೆಬ್‌ಸೈಟ್ http://sevasindhugs.karnataka.gov.in ಮೂಲಕ ಗ್ರಾಮ ಒನ್, ಕರ್ನಾಟಕ ಒನ್ ಅಥವಾ ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಯೋಜನೆಯ ಫಲಾನುಭವಿಗಳು ಪ್ರತಿ ತಿಂಗಳ 1 ರಿಂದ 25ನೇ ದಿನಾಂಕದೊಳಗೆ ಕಡ್ಡಾಯವಾಗಿ ಸ್ವಯಂ ಘೋಷಣೆ (ಸೆಲ್ಫ್ ಡಿಕ್ಲರೇಶನ್) ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಕೊಪ್ಪಳವನ್ನು ಸಂಪರ್ಕಿಸಬಹುದು. ಅಲ್ಲದೆ, ಯುವನಿಧಿ ಸಹಾಯವಾಣಿ ಸಂಖ್ಯೆ 1800 599 7154ಗೆ ಕರೆ ಮಾಡಿ ಅಗತ್ಯ ಮಾಹಿತಿ ಪಡೆಯಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಪ್ರಕಟಣೆ ತಿಳಿಸಿದೆ.

## ಬಳಗೇರಿ : ಪೂರ್ವ ವಲಯ ಮಟ್ಟದ ಪ್ರೌಢ ಶಾಲೆಗಳ ಕ್ರೀಡಾಕೂಟದಲ್ಲಿ ಹೇಳಿಕೆ

## ಕ್ರೀಡೆ ಜೀವನೋತ್ಸಕ್ಕೆ ಸಹಕಾರಿ : ಬಿಇಓ ಶ್ರೀನಿವಾಸ ಬನ್ನಿಗೋಳ

ಅ.ಶ. ಸುದ್ದಿ ಕುಕನೂರು

**ಕುಕನೂರು: ಮಕ್ಕಳು ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವದರಿಂದವ್ಯಕ್ತಿತ್ವ ವಿಕಸನದ ಜೊತೆಗೆ ದೈಹಿಕ ಹಾಗೂ ಮಾನಸಿಕವಾಗಿ ಸದೃಡವಾಗಿಸುವುದಲ್ಲದೇ ಕ್ರೀಡೆ ಜೀವನೋತ್ಸಕ್ಕೆ ಸಹಕಾರಿಯಾಗಲಿದೆ ಎಂದು ಯಲಬುರ್ಗಾ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀನಿವಾಸ ಬನ್ನಿಗೋಳ ಹೇಳಿದರು.**

=ಅವರು ತಾಲ್ಲೂಕಿನ ಬಳಗೇರಿ ಗ್ರಾಮದ ಶ್ರೀಮತಿ ಶಿವಮ್ಮ ಬಸವರಡ್ಡೆಪ್ಪ ರಡ್ಡೇರ ಸರಕಾರಿ ಪ್ರೌಢ ಶಾಲೆಯಲ್ಲಿ ಕುಕನೂರು ಪೂರ್ವ ವಲಯ ಮಟ್ಟದ ಪ್ರೌಢ ಶಾಲೆಗಳ ಕ್ರೀಡಾ ಕೂಟದಲ್ಲಿ ಕ್ರೀಡಾ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ ವಿದ್ಯಾರ್ಥಿಗಳು ಪ್ರತಿ ನಿತ್ಯ ಕ್ರೀಡೆಯಲ್ಲಿ ತೊಡಗುವುದರಿಂದ ವಿವಿಧ ಖಾಯಿಲೆಗಳನ್ನು ದೂರ ಮಾಡಲು ಸಹಕಾರಿಯಾಗುತ್ತದೆ. ಆಟಗಳು ಬದುಕಿನ ಅವಿಭಾಜ್ಯ ಅಂಗಗಳಾಗಿವೆ ಎಂದರು.



ಪ್ರತಿಯೊಬ್ಬ ಮಕ್ಕಳು ಕ್ರೀಡಾ ಮನೋಭಾವನೆ ಹೊಂದಿದವರಾಗಿರಬೇಕು, ಕ್ರೀಡೆಯಲ್ಲಿ ಸೋಲು ಗೆಲುವು ಮುಖ್ಯವಲ್ಲಾ, ಭಾಗ ವಹಿಸುವ ಮನೋಭಾವನೆ ಮುಖ್ಯ ಎಂದರು. ನಂತರ ಬಳಗೇರಿ ಸರಕಾರಿ ಪ್ರೌಢಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕಿಯರಾದ ಅಕ್ಕಮಹಾದೇವಿ ಜಿ. ಎನ್ ಮಠ ಮಾತನಾಡಿ ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿದಾಗ ಶಾರೀರಿಕ, ಬೌದ್ಧಿಕ ಬೆಳವಣಿಗೆಯ ಜೊತೆಗೆ ಆರೋಗ್ಯ ಪೂರ್ಣ ಬದುಕು ನಡೆಸಲು ಸಹಕಾರಿಯಾಗುತ್ತದೆ- ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ನಂತರ ದೈಹಿಕ ಶಿಕ್ಷಕ ಶಿವಾನಂದ ಹೊಸ್ಮನಿ ಕ್ರೀಡಾಕೂಟದ ಕುರಿತು ಸವಿಸ್ತಾರವಾಗಿ ಮಾತನಾಡಿದರು.

ಈ ವೇಳೆ ವಿವಿಧ ಶಾಲೆಗಳ ವಿದ್ಯಾರ್ಥಿಗಳಿಂದ ಖೋಖೋ, ಕಬ್ಬಡ್ಡಿ, ವ್ಹಾಲಿಬಾಲ್ ಸೇರಿದಂತೆ ಗುಂಪು ಆಟ, ವಯಕ್ತಿಕ ಆಟಗಳು ಜರುಗಿದವು. ಈ ಸಂದರ್ಭದಲ್ಲಿ ಯಲಬುರ್ಗಾ ಬಿಆರ್‌ಸಿ ಅಶೋಕಗೌಡರ್, ನಿವೃತ್ತ ಮುಖ್ಯ ಶಿಕ್ಷಕ ವಿ. ಎಸ್. ಬೆಣಕಲ್, ದೈಹಿಕ ಶಿಕ್ಷಕ ಶರಣಪ್ಪ ವೀರಾಪೂರ, ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷ ರಾಜಶೇಖರ ಹೂಗಾರ, ಶರಣಪ್ಪ ಬೂದಗುಂಪಿ, ಉಪಾಧ್ಯಕ್ಷ ರವಿ ತಳವಾರ, ನೌಕರ ಸಂಘದ ಅಧ್ಯಕ್ಷ ಮಹೇಶ ಸಬರದ, ಮುಖ್ಯ ಶಿಕ್ಷಕ ಭೀಮಪ್ಪ ಮೀಸಿ, ಬಸವರಾಜ ಮೇಟಿ, ಸುರೇಶ ಅಬ್ಬಿಗೇರಿ, ಉಮೇಶ ಕಂಬಳಿ, ಕಳಕರಡ್ಡಿ ತಿಮ್ಮರೆಡ್ಡಿ, ಸುರೇಶ ಮಾದಿನೂರ, ಶರಣಪ್ಪ ಬಿಸರಳ್ಳಿ, ಶರಣಪ್ಪ ಮದ್ಲಾಪೂರ, ಹನುಮಂತಗೌಡ ದಾದ್ಮಿ, ಮುಖಂಡರಾದ ಟಿ. ಎಸ್ ಹೂಗಾರ, ನೀಲಕಂಠಪ್ಪ ಕಂಬಳಿ, ಸುಧಾಕರ ಕುಲಕರ್ಣಿ, ಈರಪ್ಪ ದಳಪತಿ, ದೊಡ್ಡಪ್ಪ ಕೋಮಾರ, ಬಸಪ್ಪ ತಳವಾರ ಸೇರಿದಂತೆ ಶಾಲಾ ಸುಧಾರಣಾ ಸಮಿತಿ ಸರ್ವ ಸದಸ್ಯರು, ಗ್ರಾಮದ ಹಿರಿಯರು, ಯುವಕರು ಇನ್ನಿತರರು ಇದ್ದರು.

### 'ವಚನಾಮೃತ'

ಆಡಾಡುತ ಅಡಿಗೆ ಮಾಡಿದೊಡೆ
ಒಲವಿನೊಳ್ ಬಡಿಸಲೋಡುವ
ಖುಷಿ ಬೇರೆ ಕಾಣಾ! ಒದ್ದಾಡುತ
ಅಡಿಗೆ ಮಾಡಿದೊಡೆ ಹಿಂಬದಿಯೊಳ್
ಒನಕೆಯಾಕಿ ನೂಕಿದಂತೆ ಸತ್ಯವಾಣಿ!!.



ವಾಣಿ ಭಂಡಾರಿ.

## ಯುರೋಪ್‌ನಲ್ಲಿ ತೀವ್ರ ಶಾಖದ ಅಲೆ: ಇಟಾಲಿಯನ್ ನಗರಗಳಿಗೆ ರೆಡ್ ಅಲರ್ಟ್, ಆಸ್ಟ್ರಿಯಾದಲ್ಲಿ ದಾಖಲೆಯ ತಾಪಮಾನ

ಅ.ಶ. ಸುದ್ದಿ ರೋಮ್

**ರೋಮ್: ಯುರೋಪ್‌ನಲ್ಲಿ ತೀವ್ರ ಶಾಖದ ಅಲೆ ಮುಂದುವರೆದಿದ್ದು, ಇಟಲಿಯ ಎಲ್ಲಾ ಪ್ರಮುಖ ನಗರಗಳಿಗೆ ಅತ್ಯಧಿಕ ರೆಡ್ ಅಲರ್ಟ್ ಘೋಷಿಸಲಾಗಿದೆ. ವಿಮಾನಗಳು ಮತ್ತು ರೈಲುಗಳು ಸೇರಿದಂತೆ ಸಾರಿಗೆ ಸೇವೆಗಳು ಅಸ್ತವ್ಯಸ್ತಗೊಂಡಿವೆ. ಆಸ್ಟ್ರಿಯಾದಲ್ಲಿ ಸಾರ್ವಕಾಲಿಕ ಹೆಚ್ಚಿನ ತಾಪಮಾನ ದಾಖಲಾಗಿದೆ ಮತ್ತು ಫ್ರಾನ್ಸ್‌ನಲ್ಲಿ ಕಾಡ್ಗಿಚ್ಚಿನ ಬೆದರಿಕೆ ಹೆಚ್ಚಾಗಿದೆ.**

ಜರ್ಮನಿಯಲ್ಲಿ ನದಿ ನೀರಿನ ಮಟ್ಟದಲ್ಲಿನ ಕುಸಿತವು ಸಾರಿಗೆ ವ್ಯವಸ್ಥೆಯಲ್ಲಿ ಅಡ್ಡಿ ಉಂಟುಮಾಡಿದೆ ಮತ್ತು ಅನೇಕ ದೇಶಗಳಲ್ಲಿ ವಿದ್ಯುತ್ ಉತ್ಪಾದನೆ ಮತ್ತು ಸಾರ್ವಜನಿಕ ಸೇವೆಗಳ ಮೇಲೂ ಶಾಖದ ಅಲೆ ಪರಿಣಾಮ ಬೀರಿದೆ. ಇಟಾಲಿಯನ್ ಆರೋಗ್ಯ ಸಚಿವಾಲಯವು ದೇಶದ 27 ಪ್ರಮುಖ ನಗರಗಳಿಗೆ ಅದೇ ಸಮಯದಲ್ಲಿ ರೆಡ್ ಅಲರ್ಟ್ ಘೋಷಿಸಿದೆ, ಇದು ಈ ವರ್ಷದ ಮೊದಲ ಘಟನೆಯಾಗಿದೆ. ಈ ಎಚ್ಚರಿಕೆ ವೃದ್ಧರು ಅಥವಾ



ಆಧಾರವಾಗಿರುವ ಆರೋಗ್ಯ ಸಮಸ್ಯೆಗಳಿರುವವರಿಗೆ ಮಾತ್ರವಲ್ಲದೆ ಎಲ್ಲಾ ನಾಗರಿಕರಿಗೂ ಅನ್ವಯಿಸುತ್ತದೆ. ಮಧ್ಯಾಹ್ನದ ಬಿಸಿಲಿನಲ್ಲಿ ಹೊರಗೆ ಹೋಗಬೇಡಿ, ಸಾಕಷ್ಟು ನೀರು ಕುಡಿಯಬೇಡಿ ಮತ್ತು ಸಾಧ್ಯವಾದಷ್ಟು ಮನೆಯೊಳಗೆ ಇರಬೇಕೆಂದು ಅಧಿಕಾರಿಗಳು ಜನರಿಗೆ ಸಲಹೆ ನೀಡಿದ್ದಾರೆ.

ಉಷ್ಣ ಅಲೆಯು ಪ್ರವಾಸೋದ್ಯಮದ ಮೇಲೂ ಪರಿಣಾಮ ಬೀರಿದೆ, ರೋಮ್‌ನ ಕೊಲೋಸಿಯಮ್ ಮತ್ತು ಪ್ಯಾಂಥಿಯಾನ್ ಸೇರಿದಂತೆ ಪ್ರಮುಖ ಸ್ಮಾರಕಗಳಲ್ಲಿ ರಾತ್ರಿಯ ಕಾರ್ಯಾಚರಣೆಗಳನ್ನು ವಿಸ್ತರಿಸಲಾಗಿದೆ. ಕೊಲೋಸಿಯಮ್‌ನ ಪ್ರವೇಶದ್ವಾರಗಳಲ್ಲಿ ತಣ್ಣೀರು ಸಿಂಪಡಿಸಲಾಗಿದೆ ಮತ್ತು ಹೆಚ್ಚುವರಿ ವೈದ್ಯಕೀಯ ಕೇಂದ್ರಗಳನ್ನು ತೆರೆಯಲಾಗಿದೆ. ಟೈಬರ್ ನದಿಯ ದಡದಲ್ಲಿ ಉಚಿತ ನಗರ ಬೀಚ್ ಅನ್ನು ಸ್ಥಾಪಿಸಲಾಗಿದೆ, ಇದರಲ್ಲಿ ಈಜುಕೊಳ, ನೀರಿನ ಕಾರಂಜಿಗಳು ಮತ್ತು ನೆರಳಿನ ಪ್ರದೇಶಗಳು ಸಾರ್ವಜನಿಕರಿಗೆ ಮುಕ್ತವಾಗಿವೆ. ಆಸ್ಟ್ರಿಯನ್ ಗ್ರಾಮವಾದ ಬ್ಯಾಡ್ ಡಾಯ್ಚ್-ಆಲ್ಟೆನ್‌ಬರ್ಗ್ 41.2 ಡಿಗ್ರಿ ಸೆಲ್ಸಿಯಸ್ ತಾಪಮಾನವನ್ನು ದಾಖಲಿಸಿದೆ, ಇದು ದೇಶದ ಇತಿಹಾಸದಲ್ಲಿಯೇ ಅತ್ಯಧಿಕವಾಗಿದೆ. ಸ್ಲೋವಾಕಿಯಾ ಕೂಡ 42.2 ಡಿಗ್ರಿ ಸೆಲ್ಸಿಯಸ್ ತಾಪಮಾನವನ್ನು ದಾಖಲಿಸಿದೆ ಮತ್ತು ಡ್ಯಾನ್ಯೂಬ್ ನದಿಯಲ್ಲಿ ನೀರಿನ ಮಟ್ಟ ಕಡಿಮೆಯಾದ ಕಾರಣ ದೇಶದ ಅತಿದೊಡ್ಡ ಜಲವಿದ್ಯುತ್ ಸ್ಥಾವರದ ಎಂಟು ಟರ್ಬೈನ್‌ಗಳಲ್ಲಿ ಏಳು ಸ್ಥಗಿತಗೊಂಡಿವೆ.

ಹಂಗೇರಿಯಲ್ಲಿ, ಡ್ಯಾನ್ಯೂಬ್ ನದಿಯಲ್ಲಿ ನೀರಿನ ಕೊರತೆಯಿಂದಾಗಿ ಪರಮಾಣು ವಿದ್ಯುತ್ ಸ್ಥಾವರದ ಉತ್ಪಾದನೆ ತೀವ್ರವಾಗಿ ಕುಸಿದಿದೆ ಮತ್ತು ಸರ್ಕಾರವು ವಿದ್ಯುತ್ ಉಳಿತಾಯ ಕ್ರಮಗಳನ್ನು ಜಾರಿಗೆ ತಂದಿದೆ. ಸಾರ್ವಜನಿಕರು ಮತ್ತು ಉದ್ಯಮವು ಸಂಜೆಯ ಸಮಯದಲ್ಲಿ ವಿದ್ಯುತ್ ಬಳಕೆಯನ್ನು ಕಡಿಮೆ ಮಾಡಲು ಸೂಚಿಸಲಾಗಿದೆ. ಜರ್ಮನಿಯಲ್ಲಿ, ರೈನ್ ಸೇರಿದಂತೆ ಪ್ರಮುಖ ನದಿಗಳ ನೀರಿನ ಮಟ್ಟಗಳು ಕುಸಿದಿದ್ದು, ಒಳನಾಡಿನ ಜಲಮಾರ್ಗಗಳು ಮತ್ತು ಕೈಗಾರಿಕೆಗಳಿಗೆ ಬೆದರಿಕೆ ಹಾಕುತ್ತಿವೆ. ದಕ್ಷಿಣ ಫ್ರಾನ್ಸ್‌ನಲ್ಲಿ ಪ್ರಮುಖ ಕಾಡ್ಗಿಚ್ಚಿನ ಬೆದರಿಕೆ ಮುಂದುವರೆದಿದೆ, ಈಗಾಗಲೇ 60 ಚದರ ಕಿಲೋಮೀಟರ್‌ಗಿಂತಲೂ ಹೆಚ್ಚು ಅರಣ್ಯ ಸುಟ್ಟುಹೋಗಿದೆ. ಹವಾಮಾನ ಬದಲಾವಣೆಯಿಂದಾಗಿ ಇಂತಹ ತೀವ್ರ ಶಾಖದ ಅಲೆಗಳ ಹೆಚ್ಚಳವು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ವಿಜ್ಞಾನಿಗಳು ಹೇಳುತ್ತಾರೆ.

# ಲೇಖಕರ ದಿನಚರಿ...

## ಸಾಧನಾ ಪಥಕ್ಕೆ ನೀರೆರಿಯಿರಿ

### ನೀರೆರಚಬೇಡಿ, ಶಿಕ್ಷಣ–ಕೋರ್ಸ್‌ಗಳ ಆಯ್ಕೆ ಹೀಗಿದ್ದರೆ ಉತ್ತಮ!



ಎಸ್. ಎಸ್. ಎಲ್. ಸಿ , ಪಿಯುಸಿ ವಿದ್ಯಾರ್ಥಿಗಳ ಫಲಿತಾಂಶಗಳು ಬಂದಾಯಿತು. ವಿಫಲರಾದವರು, ತಮ್ಮ ಅಂಕಗಳಲ್ಲಿ ಅಸಮಧಾನವಿದ್ದವರು ಎರಡನೇ ಪರೀಕ್ಷೆಗೆ ಸಿದ್ಧವಾಗುತ್ತಿರುವುದನ್ನೂ ಗಮನಿಸಬಹುದು.

ಪೋಷಕರು ತಮ್ಮ ಮಗು ಪಡೆದ ಅಂಕಗಳಿಗೆ ಅನುಸಾರವಾಗಿ ಬೆಸ್ಟ್ ಕೋರ್ಸುಗಳ ಹುಡುಕಾಟದಲ್ಲಿದ್ದಾರೆ. ಸಾಮಾನ್ಯವಾಗಿ ಇಂದಿನ ಸಮಾಜದಲ್ಲಿ ಆ ಬೆಸ್ಟ್ ಕೋರ್ಸ್ ಗಳೆಂದರೆ ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ ಎಂಬ ಮನಃಸ್ಥಿತಿ ಹೆಚ್ಚುತ್ತಲೇ ಸಾಗಿದೆ. ನಮ್ಮ ದೇಶಕ್ಕೆ ಉತ್ತಮ ಇಂಜಿನಿಯರ್‌ಗಳು, ಒಳ್ಳೆಯ ವೈದ್ಯರು ಬೇಕೆಂಬುದೇನೋ ನಿಜ. ಆದರೆ ಬದುಕೆಂದರೆ ಇದೆರಡೇ ವಿಷಯಗಳಲ್ಲ ಮತ್ತು ಬದುಕಿಗೆ ಇರುವುದು ಇವೆರಡೇ ಆಯ್ಕೆಗಳಲ್ಲ. ಈ ಲೇಖನದಲ್ಲಿ "ಅಸಾಮಾನ್ಯ ಪ್ರತಿಭೆಯನ್ನು ಮುಚ್ಚದಿರಿ" ಎಂಬ ಕುರಿತು ಬೆಳಕು ಚೆಲ್ಲುವುದೇ ಆಗಿದೆ.

ಜೀವನದಲ್ಲಿ ಏನನ್ನು ಸಾಧಿಸಬೇಕು ಎಂದು ನಿರ್ಧರಿಸಲು ಎಸ್. ಎಸ್. ಎಲ್. ಸಿ ಅಥ–'ವಾ ಪಿಯುಸಿಯ ಹಂತವು ಸಕಾಲವೇ ಆಗಿದೆ. ತೀರಾ ಚಿಕ್ಕ ವಯಸ್ಸಿನಲ್ಲಿ ಮಕ್ಕಳಿಗೆ ಮುಂದೆ ತಾವು ಯಾವ ದಿಕ್ಕಿನಲ್ಲಿ ಸಾಗಬೇಕು ಎಂಬ ಅರಿವಿನ ಸ್ಪಷ್ಟತೆ ಇರುವುದಿಲ್ಲ. ಆದರೆ ಅವರ ಆಸಕ್ತಿಗಳನ್ನು ಗಮನಿಸುವ ಅವಕಾಶ ಮತ್ತು ಹೊಣೆಗಾರಿಕೆ ಅವರ ಪೋಷಕರಿಗೆ ಮತ್ತು ಶಿಕ್ಷಕರಿಗೆ ಇದ್ದೇ ಇದೆ.

ಇಂದಿನ ಕಾಲಘಟ್ಟದಲ್ಲಿ ಮಕ್ಕಳಲ್ಲಿ ಮನೆ ಮಾಡಿರುವ ಆಸಕ್ತಿಗಳ ಮೇಲೆ ಪೋಷಕರ ಪ್ರತಿಷ್ಠೆಗಳು ದಾಳಿ ಮಾಡುತ್ತ ಹೊರಟಿರುವುದು ಶೋಚನೀಯ ಸಂಗತಿ. ಆಸಕ್ತಿಯಿಲ್ಲದ ಕ್ಷೇತ್ರಕ್ಕೆ ಎಷ್ಟೇ ಒತ್ತಾಯದಿಂದ ಮಗುವನ್ನು ನೂಕಿದರೂ ಕೊನೆಗದು 'ಎತ್ತು ಏರಿಗೆಳೆಯಿತು, ಕೋಣ ನೀರಿಗೆಳೆಯಿತು' ಎಂದಷ್ಟೇ ಆದೀತು. ನೂಕಿದವ–ರಿಗಾಗಲೀ ನೂಕಿಸಿಕೊಂಡವರಿಗಾಗಲೀ ಅದರಲ್ಲಿ ತೃಪ್ತಿಯಿಲ್ಲವಷ್ಟೇ ಅಲ್ಲದೆ ಅದರಿಂದ ಯೋಗ್ಯ ಫಲಿತಾಂಶವನ್ನೂ ನಿರೀಕ್ಷಿಸುವಂತಿಲ್ಲ. ಒಳ್ಳೆಯ ಕಲಾವಿದನಾಗಬಲ್ಲವನನ್ನು ನೀನು ಇಂಜಿನಿಯರೇ ಆಗು ಎಂದರೆ ಹೇಗೆ? ಒಳ್ಳೆಯ ವಕೀಲನಾಗಬಲ್ಲವನನ್ನು ನೀನು ವೈದ್ಯನೇ ಆಗು ಎಂದರೆ ಹೇಗೆ? ಒಳ್ಳೆಯ ಸಾಹಿತಿಯಾಗಬಲ್ಲವನನ್ನು ನೀನು ತಂತ್ರಜ್ಞನಾಗು ಎಂದು ಒತ್ತಾಯಿಸಿದರೆ ಹೇಗೆ? ಪ್ರತಿಯೊಬ್ಬ ವ್ಯಕ್ತಿಯ ಆಸಕ್ತಿಗಳಲ್ಲಿ ವೈವಿಧ್ಯತೆಗಳಿರುವುದು ಸತ್ಯ ಅದರಂತೆ ವಿಶೇಶ ಆಸಕ್ತಿಯ ವಿಚಾರವನ್ನು ಮುಂಚೂಣಿಯಲ್ಲಿರಿಸಿ ಅದನ್ನು ಸಾಧಿಸಲು ಸತತ ಪ್ರಯತ್ನ ಮಾಡಬೇಕು ಮತ್ತು ಸಾಧಿಸಲೇಬೇಕು ಆಗಷ್ಟೇ ಬದುಕಿಗೆ ವಾಸ್ತವವಾಗಿ ಬೇಕಿರುವುದು ತೃಪ್ತಿ ಮತ್ತು ನೆಮ್ಮದಿ ಎಂಬ ಜೀವನ ಪಾಠವು ಹೃದ್ಗತವಾಗುತ್ತದೆ.

ಸ್ವಾಮಿ ವಿವೇಕಾನಂದರೆಂದಂತೆ `` Education is the only panacea for all human problems.'' ಎಲ್ಲದಕ್ಕೂ ಪರಿಹಾರವಾಗಬೇಕಾದರೆ ಆ ಶಿಕ್ಷಣವು ಹೇಗಿರಬೇಕೆಂಬುದಕ್ಕೆ ಅವರೇ "ಚಾರಿತ್ರ್ಯವನ್ನು ರೂಪಿಸುವ, ಮಾನಸಿಕ ಶಕ್ತಿಯನ್ನು ವೃದ್ಧಿಸುವ, ಬೌದ್ಧಿಕ ಸಾಮರ್ಥ್ಯವನ್ನು ವಿಸ್ತೃತಗೊಳಿಸುವ ಮತ್ತು ಸ್ವತಂತ್ರವಾಗಿ ತನ್ನ ಕಾಲ ಮೇಲೆ ನಿಲ್ಲಲು ನೆರವಾಗುವ ಶಿಕ್ಷಣ ಬೇಕು." ಎಂದಿದ್ದಾರೆ. ಆದರೆ ಇಂದು ಶಿಕ್ಷಣವೇ ಯುವಪೀಳಿಗೆಯ ಮುಂದೆ ಸಮಸ್ಯೆಯಾಗಿ ಪರಿಣಮಿಸಿದೆ ಮತ್ತು ಉನ್ನತ ಶಿಕ್ಷಣದ ಆಯ್ಕೆಯ ವಿಷಯವಂತೂ ಕಗ್ಗಂಟಾಗಿದೆ.

ವಿದ್ಯಾಭ್ಯಾಸ ಮುಗಿಯುವ ವೇಳೆಗೆ ವಿದ್ಯಾರ್ಥಿಯ ವ್ಯಕ್ತಿತ್ವದಲ್ಲಿ ಒಂದು ವೈಶಿಷ್ಟ್ಯತೆ ಕಾಣುವಂತಿ–ರಬೇಕು. ಆತ ಅಧ್ಯಯನ ನಡೆಸಿದ ವಿಷಯದ ಬಗೆಗೆ ವಿನೂತನ ಚಿಂತನಾ ಸಾಮರ್ಥ್ಯ ಬೆಳೆದಿರಬೇಕು. ಕೇವಲ ಓದು–ಬರಹ, ಮಾಹಿತಿಗಳ ಸಂಗ್ರಹ ಹೊಂದಿದ ವಿದ್ಯಾರ್ಥಿಯನ್ನು ವಿದ್ಯಾವಂತನೆಂದು ಕರೆಯುವುದು ಔಪಚಾರಿಕವಷ್ಟೆ. ರಾಮಕೃಷ್ಣ ಮಿಷನ್ನಿನ ಹಿರಿಯ ಯತಿಗಳಾಗಿದ್ದ ಬ್ರಹ್ಮಲೀನ ಸ್ವಾಮಿ ಪುರುಷೋತ್ತಮಾನಂದರ ?ವಿಚಾರಕಿರಣ ಭಾವಸ್ಫುರನ? ಎಂಬ ಗ್ರಂಥದಲ್ಲಿ ಅವರು ಉಲ್ಲೇಖಿಸಿರುವಂತೆ ವಿಜ್ಞಾನದ ಪಾಠವನ್ನು ಚೆನ್ನಾಗಿ ಉರು ಹೊಡೆದು ಪರೀಕ್ಷೆಯ ದಿನ ಅದನ್ನು ಪತ್ರಿಕೆಯ ಮೇಲೆ ಪಡಿಮೂಡಿಸಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾಗಿ ಪದವೀಧರನಾದರೂ ಅವನು ವಿಜ್ಞಾನಿಯೆನಿಸಲಾರ.

ಆದರೆ ಅದೇ ವ್ಯಕ್ತಿಯು ತಾನು ಅಧ್ಯಯನ ಮಾಡಿದ ವಿಜ್ಞಾನದ ವಿಷಯದ ಮೇಲೆ ಸಂಶೋಧನೆ ನಡೆಸಿ ವಿನೂತನ ಸತ್ಯಾಂಶವೊಂದನ್ನು ಆವಿಷ್ಕರಿಸಲು ಸಮಥ–'ನಾದಾಗ ವಿಜ್ಞಾನಿಯೆನಿಸಿಕೊಳ್ಳುತ್ತಾನೆ. ಇದೇ ಮಾತು ಸಾಹಿತ್ಯ, ಕಲೆ, ಸಂಸ್ಕೃತಿ, ತಾಂತ್ರಿಕತೆಯೇ ಮೊದಲಾದ ಎಲ್ಲ ವಿಷಯಗಳಿಗೂ ಅನ್ವಯಿಸುತ್ತದೆ. ಹೀಗೆ ನಮ್ಮ ಅಂತರಂಗವೊಪ್ಪುವ ಒಂದು ವಿಷಯವನ್ನು ಆಯ್ದುಕೊಂಡು ಆ ವಿಷಯದ ಕುರಿತಾಗಿಯೇ ಚಿಂತನೆ ನಡೆಸ ಬೇಕು. ಆ ವಿಷಯದ ಕುರಿತಾಗಿಯೇ ಕನಸು ಕಾಣಬೇಕು ಮತ್ತು ಆ ವಿಷಯವನ್ನೇ ನಮ್ಮ ಉಸಿರಾಗಿಸಿಕೊಳ್ಳಬೇಕು.

ಆಗ ಆ ವಿಷಯವು ತನ್ನ ಸ್ವರೂಪದ ರಹಸ್ಯವನ್ನು ತಾನಾಗಿಯೇ ನಮಗೆ ಬಿಟ್ಟುಕೊಡುತ್ತದೆ. ಎಂದರೆ, ಆ ರಹಸ್ಯವು ನಮ್ಮ ಮನಸ್ಸಿಗೆ ಗೋಚರಿಸುತ್ತದೆ. ಆಗ ಮಾತ್ರವೇ ನಾವು ಆ ವಿಷಯದ ಕು–ರಿತು ಜ್ಞಾನವಂತರಾಗಿದ್ದೇವೆ ಎನ್ನಲಡ್ಡಿಯಿಲ್ಲ. ಜನಮಾನಸದಲ್ಲಿ ಇಂದಿಗೂ ನೆಲೆ ನಿಂತಿರುವ ಸಾಹಿತಿಗಳಿದ್ದಾರೆ, ಕಲಾವಿದರಿದ್ದಾರೆ, ವಿಜ್ಞಾನಿಗಳಿದ್ದಾರೆ, ತತ್ತ್ವದರ್ಶಿಗಳಿದ್ದಾರೆ, ಇವರೆಲ್ಲರೂ ತಾವು ಆನಂದದಿಂದ ಆಯ್ದುಕೊಂಡು ವಿಷಯದೊಳಕ್ಕೆ ಆಳವಾಗಿ ಮುಳುಗಿ ಆ ವಿಷಯದ ದರ್ಶನ ಮಾಡಿದವರು, ಎಂದರೆ, ಆ ವಿಷಯದ ಆಮೂಲಾಗ್ರ ಪರಿಜ್ಞಾನ ಹೊಂದಿದವರು. ಆದ–'ರೆ ಇಂದು ನಾವು ಕಾಣುತ್ತಿರುವುದು ಶಿಕ್ಷಣವು ಅಂಕಗಳ ಬೆನ್ನಟ್ಟುವ ಓಟವಾಗಿದೆ. ಆಸಕ್ತಿ ವಿಷಯಗಳನ್ನು ಆಯ್ದುಕೊಳ್ಳಲು ವಿದ್ಯಾರ್ಥಿಗಳಿಗೆ ಒಂದೆಡೆ ಪೋಷಕರು ಮತ್ತೊಂದೆಡೆ ಸಮಾಜವು ಅಡ್ಡಿಯಾಗಿರುವುದನ್ನ ಗಮನಿಸಬಹುದು. ಒಟ್ಟಾರೆ ?ವಿಶ್ವ ವಿದ್ಯಾಲಯಗಳು ಯೋಗ್ಯತಾ ಪತ್ರಗಳನ್ನು ವಿತರಿಸುತ್ತಿವೆಯೇ ಹೊರತು ಯೋಗ್ಯತೆಯನಲ್ಲ.? ಎಂಬ ಪೂಜ್ಯ ಶ್ರೀ ಪುರುಷೋತ್ತಮಾನಂದರ ಮಾತು ಇಂದಿನ ಶಿಕ್ಷಣ ಪದ್ಧತಿಯ ದೌರ್ಬಲ್ಯಗಳನ್ನು ನಗ್ನಗೊಳಿಸಿದೆ.

ಆದರೆ ನಮ್ಮ ಮಕ್ಕಳ ಜೀವನವನ್ನು ಉತ್ತಮಗೊಳಿಸುತ್ತಿದ್ದೇವೆ ಎಂಬ ಭ್ರಮೆಯಲ್ಲಿ ಅವರ ಜೀವನವನ್ನು 'Good life? ಬದಲಾಗಿ 'Goods life? ಮಾಡುತ್ತಿರುವುದು ಸತ್ಯಸ್ಯ ಸತ್ಯ.

ಮಕ್ಕಳು ಹತ್ತನೇ ತರಗತಿ ಮುಗಿಯುತ್ತಿದ್ದಂತೆ ತಮ್ಮ ಅಧ್ಯಯನ ಕ್ಷೇತ್ರದ ಸ್ಪಷ್ಟ ಕಲ್ಪನೆಯೊಂದಿಗೆ ಹೊರಹೊಮ್ಮಲು ಹಿರಿಯರು ಸಹಕರಿಸಿ. ಯಾವುದನ್ನೂ ಅತಿಯಾಗಿ ಹೇರಲು ಹೋಗದಿರಿ. ಕಲೆ, ವಾಣಿಜ್ಯ ಮತ್ತು ವಿಜ್ಞಾನ ಎಂದು ಮೂರು ಹಾದಿಗಳು ನಿಮ್ಮ ಮಕ್ಕಳ ಮುಂದಿರುತ್ತದೆ. ಅವರ ಕನಸು ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ಎಚ್ಚ–ರಿಕೆಯ ನಿರ್ಧಾರವನ್ನು ಮಕ್ಕಳೇ ತೆಗೆದುಕೊಳ್ಳಲು ಅನುವು ಮಾಡಿಕೊಟ್ಟು ಅವರ ಆಯ್ಕೆಯನ್ನು ಸಾಧಿಸುವ ನಿಟ್ಟಿನಲ್ಲಿ ಪೋಷಕರು ಸಹಕಾರ, ಮಾರ್ಗದರ್ಶನವನ್ನೀಯುವುದು ಅವಶ್ಯಕ.

ಪಿಯುಸಿಯಲ್ಲಿ ವಿಜ್ಞಾನ ಆಯ್ಕೆ ಮಾಡಿಕೊಂಡವರು ನೀಟ್, ಜೆಇಇ, ಸಿಇಟಿ ಪರೀಕ್ಷೆಗಳನ್ನು ತೆಗೆದುಕೊಳ್ಳುತ್ತಾರೆ. ಅವುಗಳಲ್ಲಿ ತಕ್ಕಮಟ್ಟಿನ ರ?ಯಾಂಕ್ ಪಡೆದುಕೊಂಡವರು ಆಯಾ ಕ್ಷೇತ್ರಗಳಿಗೆ ಲಗ್ಗೆಯಿಡುತ್ತಾರೆ. ಎಲ್ಲಾ ಪರೀಕ್ಷೆಗಳಿಗೆ ತಳ್ಳುವುದು ಯಾವುದರಲ್ಲಿ ಸೀಟ್ ಸಿಗುವುದೋ ಅದರಲ್ಲೇ ಅಧ್ಯಯನ ಮುಂದುವರೆಸಲು ನಿರ್ದೇಶಿಸುವುದು ಇಂದಿನ ಪೋಷಕರ ಅವೈಜ್ಞಾನಿಕ ನಿರ್ಧಾರವಾಗಿದೆ. ಅಲ್ಲಿ ಸೀಟು ಸಿಗದೇ ಇರುವವರು ಬಿಎಸ್ಸಿ ಕೋರ್ಸುಗಳಿಗೆ ಸೇರುವವರು ಎಂಬ ಮನಸ್ಥಿತಿ ಈಗ ಬೆಳೆದಿದೆ. ಆದರೆ ಇಂದು ಮೂಲವಿಜ್ಞಾನದಲ್ಲಿ ವ್ಯಾಸಂಗ ಮುಂದುವ–ರಿಸುವವರ ಅಗತ್ಯ ತುಂಬ ಇದೆ ಎಂಬ ಅಂಶ ಬಹಳ ಮಂದಿಗೆ ತಿಳಿದಿಲ್ಲ. ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಪ್ರಾಣಿಶಾಸ್ತ್ರ ಮುಂತಾದ ಮೂಲವಿಜ್ಞಾನದ ಶಾಖೆಗಳಲ್ಲಿ ಶ್ರೇಷ್ಠ ವಿಜ್ಞಾನಿಗಳು ತಯಾರಾಗುವುದನ್ನು, ಅವರಿಂದ ಸಂಶೋಧನೆಯ ಕ್ಷೇತ್ರಕ್ಕೆ ಹೊಸಹೊಸ ಕೊಡುಗೆಗಳಾಗುವುದನ್ನು ಪ್ರಪಂಚ ಎದುರುನೋಡುತ್ತಿದೆ. ಏಕೆಂದರೆ ಯಾವುದೇ ಕ್ಷೇತ್ರ ಮುಂದುವರಿಯಬೇಕಾದರೆ ಅದರಲ್ಲಿ ಹೊಸಹೊಸ ಸಂಶೋಧನೆಗಳಾಗಬೇಕು.

ವಾಣಿಜ್ಯ ವಿಭಾಗದಲ್ಲೂ ಹೇರಳ ಅವಕಾಶಗಳಿವೆ. ಆರ್ಥಿಕವಾಗಿ, ವ್ಯಾವಹಾರಿಕವಾಗಿ ನಮ್ಮ ದೇಶವು ಬೆಳೆಯಬೇಕಾದರೆ ವಿಜ್ಞಾನ ಒಂದೇ ಸಾಲದು ವಾಣಿಜ್ಯವೂ ಬೇಕು ಎಂಬ ಆಲೋಚನೆಗಳು ನಿಧಾನವಾಗಿ ಬೆಳೆಯುತ್ತಿರುವುದು ಹರ್ಷದಾಯಕ ಸಂಗತಿ. ಹಾಗೆಯೇ ಕಲಾ ವಿಭಾಗವೂ ಕಾನೂನು ಕ್ಷೇತ್ರ, ಮನಃಶಾಸ್ತ್ರ, ಜಾಹಿರಾತು ಕ್ಷೇತ್ರ, ಗ್ರಾಫಿಕ್ /ಅನಿಮೇಷನ್, ಮಾಧ್ಯಮರಂಗ, ಮೇಲಾಗಿ ನಾಗರಿಕ ಸೇವೆಗಳಿಗೆ ತವರಾದ ಯು ಪಿ ಎಸ್ ಸಿ ಪರೀಕ್ಷೆಗಳು ಲಭ್ಯವಿದೆ. ಆದರೆ ಸಾರ್ವಜನಿಕ ಸೇವೆಗೆ ಸೂಕ್ತವೆನಿಸಿದ ಪರೀಕ್ಷೆಗಳಲ್ಲಿ ವಿಜ್ಞಾನ, ವಾಣಿಜ್ಯ ಮತ್ತು ಕಲಾ ವಿಭಾಗದ ಪದವೀಧರರೆಲ್ಲರೂ ಭಾಗವಹಿಸಿ ಯಶಸ್ವಿಯಾಗಬಹುದಾಗಿದೆ.

ಮಕ್ಕಳ ಆಸಕ್ತಿಗಳಿಗೆ ಸರಿಹೊಂದುವ ವೃತ್ತಿಕ್ಷೇತ್ರದತ್ತ ಅವರನ್ನು ಮುನ್ನಡೆಸಿದರೆ ಅದು ಯಾವುದೇ ಕ್ಷೇತ್ರವಾದಲ್ಲಾದರೂ ಯಶಸ್ವಿಯಾಗಬಲ್ಲರು. ಅಲ್ಲದೆ ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ನಿಸ್ಸಂಶಯವಾಗಿ ಒಳ್ಳೆಯ ಸ್ಥಾನಮಾನ ದೊರಕಿಸೀತು. ನೆನಪಿರಲಿ, ಈ ನೆಲದಲ್ಲಿ ಜನಿಸಿದ ಪ್ರತಿಯೊಂದು ಮಗುವೂ ಅಸಾಮಾನ್ಯ. ಅದರ ಸಾಧನೆಯ ಪಥಕ್ಕೆ ಪೋಷಕರಾಗಿ ನೀರೆರೆಯಿರಿ, ನೀರೆರಚುವ ಕೆಲಸ ಬೇಡ!

**ಶ್ರೀಮತಿ ಗೀತಾ ಪ್ರವೀಣ್ ಭಟ್ ಉಡುಪಿ**

## ಕನ್ನಡಿ

ಈಗ ನಾ ನೋಡಿ ಬಂದ
ಕನ್ನಡಿಯ ಬಿಂಬ
ಇನ್ನು ಅಲ್ಲೇ ಇರಬಹುದಾ ?

ಒಡೆದು ಚೆಲ್ಲಿ ಬಿದ್ದ
ಕನ್ನಡಿಯೊಳಗೆ
ನನ್ನ ಹಲವು ಮುಖವಾಡಗಳು..

ನಗುಮೊಗವ ತೋರಿದ
ನೀನು, ಒಡಲಿನ
ತಪನೆಯ ಅಡಗಿಸಿದೆ..
ಕನ್ನಡಿಯೇ.. ನೀನು ಅರೆಪಾರಕ??

ಹಿಂದೆಲ್ಲ ಕನ್ನಡಿಯನ್ನು
ಅತಿ ಇಷ್ಟ ಪಡುತ್ತಿದ್ದವಳು
ಈಗೀಗ ದ್ವೇಷಿಸುತ್ತಿದ್ದಾಳೆ..

ಜಗವರಿತವನಿಗೆ
ಸ್ವಂತ ಮುಖ ತೋರಿದ್ದು
ಕನ್ನಡಿ..

ಅವಳ 'ಮುಖಗಳು'
ಇನ್ನೂ ಕನ್ನಡಿಯ
ಎಣಿಕೆಗೆ ಸಿಗಲಿಲ್ಲ

**–ಹುಸೇನಿ**

## ಬೇರೆಯವರ ಎಲೆಯ ನೋಟವೇ ನಮಗೆ ಇಷ್ಟ!

" ಅಬ್ಬಾ , ಮನಸ್ಸು ಹಗೂರವಾಯಿತು !" ಉದ್ಗಾರ ತೆಗೆದ ರುಕ್ಕುವಿನ ಮುಖ ನೋಡಿದೆ . " ಯಾಕೆ, ಏನಾಯ್ತು?" ಎನ್ನುವುದಕ್ಕೆ ಮುಂಚೆ ಅವಳೇ ನುಡಿದಳು, " ಸಧ್ಯ ಅವರಮ್ಮ ಅವನನ್ನು ನೋಡಲು ಬಂದಳು" ಕಣ್ಣು ಕಣ್ಣು ಬಿಟ್ಟೆ. ಯಾರಮ್ಮ, ಯಾರನ್ನು ನೋಡಲು ಬಂದಳು? ನನ್ನ ಸಹಾಯಕಿಂ–ಯಾಗಿರುವ ಈ ರುಕ್ಕು, ಹಾಗೂ ಅವಳ ಅಮ್ಮನಿಗೂ ಸದಾ ಜಗಳ. ಹೀಗಿರುವಾಗ ಈ ಅಮ್ಮ ಯಾರು? ಯಾರನ್ನು ನೋಡಲು ಬಂದಳು? ಅದಕ್ಕೆ ರುಕ್ಕುವಿನ ಮನಸ್ಸೇಕೆ ಸಂತಸಗೊಳ್ಳಬೇಕು? ಚಿಕ್ಕವಯಸ್ಸಿನಲ್ಲಿ ಬರೆಯುತ್ತಿದ್ದ – ಯಾರು, ಯಾವಾಗ, ಯಾಕೆ ಕೇಳುತ್ತಿದ್ದ ಪ್ರಶ್ನೆಪತ್ರಿಕೆ ನೆನಪಿಗೆ ಬಂತು.

ಅಷ್ಟರಲ್ಲಿಯೇ ಅವಳು ನುಡಿದಳು " ಅದೇ ಅಕ್ಕ, ಆ ನಟನ ತಾಯಿ ಅವನನ್ನು ನೋಡಲು ಬಂದೇ ಇಲ್ಲ ಎಂದು ಎಲ್ಲಾ ಮಾಧ್ಯಮದವರೂ ಹೇಳಿ ಹೇಳಿ ಟೆನ್ಷನ್ ಆಗಿತ್ತು. ಈಗ ನಿರಾಳವಾಯಿತು , ಬಂದು ಮಗನನ್ನು ಮಾತಾಡಿಸಿ ಹೋದರಂತೆ. ನಟ ತುಂಬಾ ಭಾವುಕನಾದನಂತೆ!" ಜೈಲು ಪಾಲಾಗಿರುವ ನಟನ ಬಗ್ಗೆ, ತನ್ನ ಮನೆಯಲ್ಲಿ ಇರುವ ಸಾವಿರ ತೊಂದರೆಗಳನ್ನು ಬದಿಗಿಟ್ಟು , ಬರೀ ರುಕ್ಕು ಮಾತ್ರವಲ್ಲ, ಇಡೀ ರಾಜ್ಯದ ಜನತೆ ತೋರುತ್ತಿರುವ ಆಸಕ್ತಿ ಈಗಾಗಲೇ ಚೆನ್ನಾಗಿ ಗೊತ್ತಾಗಿದ್ದ ನಾನು ಪ್ರತಿಕ್ರಿಯಿಸುವ ತೊಂದರೆ ತೆಗೆದುಕೊಳ್ಳಲಿಲ್ಲ.

" ಏನಾಂಟಿ , ನಿಮ್ಮ ಮನೆಗೆ ಬರುತ್ತಾ ಇದ್ದರಲ್ಲ, ಆ ಅಂಕಲ್ ಕಾಣುತ್ತ ಇಲ್ಲವಲ್ಲ?" ಪಕ್ಕದ ಮನೆ ಹುಡುಗಿ ರಂಜಿತಾ ಕೇಳಿದ ಪ್ರಶ್ನೆ ಕೇಳಿ ಗೊಂದಲ ಉಂಟಾಯಿತು.

ಯಾರು ಅಂತ ಗೊತ್ತಾಗಲಿಲ್ಲವಲ್ಲ ಎಂದು ಹೇಳುವಷ್ಟರಲ್ಲಿ ಅವಳೇ ನುಡಿದಳು. " ಅದೇ ಸ್ವಲ್ಪ ಡುಮ್ಮಕ್ಕೆ, ಕೂದಲು ಕೊಂಚ ಕಮ್ಮಿ, ಹಸಿರು ಕಣ್ಣು, ಸಿಗರೇಟಿನ ವಾಸನೆ " ವಿವರಣೆ ಕೇಳಿ ಅವಳು ಹೇಳುತ್ತಿದ್ದ ವ್ಯಕ್ತಿ ನಮ್ಮ ಮನೆಯ ಮಹಡಿಯ ಕೋಣೆಯನ್ನು ಆಫೀಸಿಗಾಗಿ ಬಾಡಿಗೆಗೆ ಹಿಡಿದ ವ್ಯಕ್ತಿ ಎಂದು ಗೊತ್ತಾಯಿತು.
ಅವನ ಪಾಡಿಗೆ ಅವನು ಬಂದು ತನ್ನ ಕೆಲಸ ಮುಗಿಸಿ ಹೋಗುತ್ತಿದ್ದ. ಒಮ್ಮೊಮ್ಮೆ ಕಿಟಕಿಯಿಂದ ಬರುತ್ತಿದ್ದ ಸಿಗರೇಟಿನ ವಾಸನೆ ಬಿಟ್ಟರೆ ಅವನು ಬಂದದ್ದು, ಹೋಗಿದ್ದರ ಬಗ್ಗೆ ಗೊತ್ತಾಗುತ್ತಲೇ ಇರಲಿಲ್ಲ. ಬಾಡಿಗೆಯ ಹಣವನ್ನು ಸಹ ಆನ್ಲೈನ್ ಪಾವತಿಸುತ್ತಿದ್ದ ಅವನನ್ನು ಇಷ್ಟು ಗಮನವಿಟ್ಟು ನಾನೇ ನೋಡಿಲ್ಲ. " ಅವರು ಬಂದಾಗಲೆಲ್ಲ ಎದುರು ಮನೆ ರಚನಾ ನಿಮ್ಮ ಮನೆಗೆ ಬರುತ್ತಾ ಇದ್ದಳಲ್ಲ, ಅದಕ್ಕೆ ಆವಯ್ಯ ಕೂಡ .." ನನ್ನ ದುರುಗುಟ್ಟುವಿಕೆ ಕಂಡು " ಬರ್ತೀನಿ ಆಂಟಿ " ಎಂದು ಹೊರಟಳು. ಪಾಪ, ಗಂಡ ಹೋದ ಮೇಲೆ ಸಂಸಾರ ಸಾಗಿಸುವುದಕ್ಕೆ ಹೆಣಗಾಡುತ್ತಿರುವ ರಚನಾ ಬಗ್ಗೆ ನನಗೆ ಬಹಳ ಅನುಕಂಪವಿತ್ತು.



ಸಮಯ ಸಿಕ್ಕಿದಾಗ ನಮ್ಮ ಮನೆಗೆ ಬಂದು, ನನಗೆ ಕೈಲಾದಷ್ಟು ಸಹಾಯ ಮಾಡುವ ಅವಳಿಗೆ ನನ್ನ ಕೈಲಾದಷ್ಟು ಧನಸಹಾಯ ಮಾಡುತ್ತಿರುವೆ. ಈ ರಂಜಿತಾ ಅಕ್ಕ ಡ್ರೈವರ್ ಜತೆ ಮನೆ ಬಿಟ್ಟು ಓಡಿ ಹೋಗಿ, ಮತ್ತೆ ವಾಪಸ್ ಬಂದು, ದೊಡ್ಡ ಕತೆ ಆಗಿದ್ದು ಮರೆತು, ಯಾರದೋ ಮನೆಯ ಬಾಡಿಗೆಯವ, ಅವನ ಮನೆ ಎದುರಿನ ಹೆಂಗಸಿನ ಬಗ್ಗೆ ಯೋಚಿಸುತ್ತಿರುವ ಪರಿಯನ್ನು ಕಂಡು ಅಬ್ಬಾ , ಎಂತಹ ಜನ ಎಂದು ಬೇಸರವಾಯಿತು.
ಛೇ. ಎಂತಹ ಅನ್ಯಾಯ !" ಮೊಬೈಲ್ ನೋಡುತ್ತಾ ಊಟ ಮಾಡುತ್ತಿದ್ದ ಸಹೋದ್ಯೋಗಿ ರತ್ನಾಳ ಮೋರೆ ನೋಡಿದೆ. ಅಕ್ರಮ ಸಂಬಂಧಗಳು, ಅನಾಚಾರ , ವ್ಯವಸ್ಥೆಯ ವಿರುದ್ಧ ಉದ್ದುದ್ದ ಲೇಖನ ಬರೆಯುವ ಒಬ್ಬಾತನನ್ನು ಪೊಲೀಸರು ಪ್ರಶ್ನಿಸಿದ ಬಗ್ಗೆ ವರದಿಯಿತ್ತು.

ಕೀಳು ಮಟ್ಟದ , ಕೆಟ್ಟ ಅಭಿರುಚಿಂ–ಯ ಆ ಮನುಷ್ಯನ ಬಗ್ಗೆ ಬಹಳ ಜನಕ್ಕೆ ಒಳ್ಳೆಯ ಅಭಿಪ್ರಾಯ ಇರಲಿಲ್ಲ. ಅದರ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಬರೆದದ್ದು ಓದಿ ಇವಳಿಗೆ ಬೇಸರ. " ನಿಂಗ್ಯಾಕೆ ಊರಿನವರ ಉಸಾಬರಿ? ಬರೆಯೋಕ್ಕೆ ದಂ ಇದ್ದರೆ ಅದನ್ನ ಸಮರ್ಥಿಸಿಕೊಳ್ಳುವ ಶಕ್ತಿಯೂ ಇರುತ್ತದೆ. ಯೋಚಿಸಬೇಡ " ಎನ್ನಲು ಹೊರಟವಳು ಸುಮ್ಮನಾದೆ.
ಮಾನವನಿಗೆ ಸಹಜವಾಗಿ ಬೇರೆಯವರ ಬಗ್ಗೆ ಆಸಕ್ತಿ ಜಾಸ್ತಿ. ಹಿಂದೆಲ್ಲ ಮನೆ ಮುಂದಿನ ಕಟ್ಟೆಯ ಮೇಲೆ ನಡೆಯುತ್ತಿದ್ದ ಚರ್ಚೆಗಳು ಈಗ ಮಾಧ್ಯಮಗಳಲ್ಲಿ, ಸಾಮಾಜಿ–ಕ ಜಾಲತಾಣಗಳಲ್ಲಿ ಯಾವುದೇ ರೀತಿಯ ಮುಚ್ಚುಮರೆಯಿಲ್ಲದೆ, ಮುಜಿಗರವಿಲ್ಲದೆ ನಡೆಯುತ್ತಿದೆ. ನಮಗೆ ಅರಿವಿಲ್ಲದೆ ನಾವು ಸಹ ಇದರಲ್ಲಿ ಭಾಗಿಯಾಗುತ್ತಿದ್ದೇವೆ. ಅನಾಮಧೇಯವಾಗಿ ಜನರ ನಾಲಿಗೆ , ಲೇಖನಿ ಎಲ್ಲರನ್ನೂ ಖಂಡಿಸುತ್ತಿದೆ. ನಮ್ಮನ್ನು ನಾವು ತಿದ್ದಿಕೊಳ್ಳುವ ಮಾತು ದೂರ, ಬೇರೆಯವರ ಕಷ್ಟದಲ್ಲಿ, ತಪ್ಪುಗಳಲ್ಲಿ ತಮ್ಮ ಬಗ್ಗೆ ಯೋಚಿಸದೇ ಬೇರೆಯವರ ಎಂಜಿಲೆಲೆಯೇ ರುಚಿ ಎನ್ನುವವರಿಗೆ ಬುದ್ಧಿ ಹೇಳಲು ಸಾಧ್ಯವೇ?

# ರಾಜ್ಯಮಟ್ಟದ ಸಂಯಮ ಪ್ರಶಸ್ತಿ ಪ್ರದಾನ ಸಮಾರಂಭ–2026: ಪೂರ್ವಸಿದ್ಧತಾ ಸಭೆ

## ಕಾರ್ಯಕ್ರಮದಲ್ಲಿ ಯಾವುದೇ ಚ್ಯುತಿ ಬರದಂತೆ ಜಿಲ್ಲಾಡಳಿತದಿಂದ ಅಚ್ಚುಕಟ್ಟು ವ್ಯವಸ್ಥೆ ಮಾಡಬೇಕು: ಮಂಡಳಿ ಅಧ್ಯಕ್ಷ ಶರಣಪ್ಪ ಸಲಾದಪುರ

**ಅ.ಶ. ಸುದ್ದಿ ಕೊಪ್ಪಳ**

**ಕೊಪ್ಪಳ: ಆಗಸ್ಟ್ 16 ರಂದು ಕೊಪ್ಪಳ ತಾಲ್ಲೂಕಿನ ಹಟ್ಟಿ ಗ್ರಾಮದಲ್ಲಿ ನಡೆಯಲಿರುವ ಸಂಯಮ ಪ್ರಶಸ್ತಿ–2026 ಪ್ರದಾನ ಸಮಾರಂಭವು ರಾಜ್ಯ ಮಟ್ಟದ ಕಾರ್ಯಕ್ರಮವಾಗಿದ್ದು, ಕಾರ್ಯಕ್ರಮಕ್ಕೆ ಗಣ್ಯರು, ಮಂತ್ರಿಗಳು ಆಗಮಿಸುವುದರಿಂದ ಹಾಗೂ ಸುಮಾರು 1,500 ಕ್ಕೂ ಹೆಚ್ಚು ಜನರು ಸೇರುವುದ–ರಿಂದ ಕಾರ್ಯಕ್ರಮದಲ್ಲಿ ಯಾವುದೇ ಗೊಂದಲ ಉಂಟಾಗದಂತೆ ಶಿಷ್ಟಾಚಾರಕ್ಕೆ ಚ್ಯುತಿ ಬರದಂತೆ ಜಿಲ್ಲಾಡಳಿತ ಅಚ್ಚುಕಟ್ಟು ವ್ಯವಸ್ಥೆ ಮಾಡಬೇಕು ಎಂದು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರಾದ ಶರಣಪ್ಪ ಸಲಾದಪುರ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.**

ಶುಕ್ರವಾರದಂದು ಜಿಲ್ಲಾ ಪಂಚಾಯತಿಯ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಪ್ರತಿಷ್ಠಿತ ಸಂಯುಮ ಪ್ರಶಸ್ತಿ–2026 ಪ್ರದಾನ ಸಮಾರಂಭದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಈ ಬಾರಿಯ ಸಂಯಮ ಪ್ರಶಸ್ತಿಯು ಕೊಪ್ಪಳ ಜಿಲ್ಲೆಯ 'ಹಟ್ಟಿ' ಗ್ರಾಮಕ್ಕೆ ಲಭಿಸುತ್ತಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಶ್ರೀ ಗವಿ ಸಿದ್ದೇಶ್ವರ ಸ್ವಾಮೀಜಿಯವರ ದಿವ್ಯ ಸಾನ್ನಿಧ್ಯ ಹಾಗೂ ಮಾರ್ಗದರ್ಶನದಲ್ಲಿ ಈ ರಾಜ್ಯ ಮಟ್ಟದ ಬೃಹತ್ ಕಾರ್ಯಕ್ರಮ ನೆರವೇರಲಿದೆ. ಸಮಾರಂಭದಲ್ಲಿ ಇಳಕಲ್‌ನ ಡಾ.ಗುರು ಮಹಾಂತ ಸ್ವಾಮೀಜಿ ಅವರು ಕೂಡ ಸಾನಿಧ್ಯ ವಹಿಸಲಿದ್ದಾರೆ.



ಮಂಡಳಿಯಿಂದ ಈ ಪ್ರಶಸ್ತಿಯನ್ನು ಮಹನೀಯ ವ್ಯಕ್ತಿಗಳಿಗೆ ನೀಡಲಾಗುತ್ತಿತ್ತು. ಆದರೆ ಕೊಪಪಳದ ಗವಿಸಿದ್ದೇಶ್ವರ ಸ್ವಾಮೀಜಿಯವರ ಸಲಹೆಯಂತೆ ಮದ್ಯಪಾನ ಮುಕ್ತ ಗ್ರಾಮವಾದ ಹಟ್ಟಿ ಗ್ರಾಮವನ್ನು ಈ ಬಾರಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಆಗಸ್ಟ್ 16 ರಂದು ಸಂಜೆ 4.30 ಗಂಟೆಗೆ ಹಟ್ಟಿ ಗ್ರಾಮದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಹಟ್ಟಿ ಗ್ರಾಮಕ್ಕೆ ಪ್ರಶಸ್ತಿ ಹಾಗೂ ಉಳಿದ 10 ಗ್ರಾಮಗಳಿಗೆ ಮದ್ಯ ಮಾರಾಟ ಮುಕ್ತ ಅಭಿನಂದನಾ ಪ್ರಶಸ್ತಿ ನೀಡಲಾಗುತ್ತದೆ. ಆದ್ದರಿಂದ ಸಮಾರಂಭವನ್ನು ಅತ್ಯಂತ ಯಶಸ್ವಿಯಾಗಿ ಹಾಗೂ ವ್ಯವಸ್ಥಿತವಾಗಿ ನಡೆಸಿ ಕೊಡುವ ನಿಟ್ಟಿನಲ್ಲಿ ಜಿಲ್ಲಾಡಳಿತದ ವಿವಿಧ ಇಲಾಖೆಗಳಿಗೆ ನಿರ್ದಿಷ್ಟ ಜವಾಬ್ದಾರಿಗಳನ್ನು ವಹಿಸಲಾಗಿದ್ದು, ಅದರಂತೆ ಎಲ್ಲ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು. ಸಮಾರಂಭಕ್ಕೆ ಕಡ್ಡಾಯವಾಗಿ ಜಿಲ್ಲೆಯ ಎಲ್ಲ ಅಧಿಕಾರಿಗಳು ಹಾಜರಿರಬೇಕು ಎಂದು ಅಧ್ಯಕ್ಷರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೊಪ್ಪಳ ತಹಶೀಲ್ದಾರ್ ಅವರು ಈ ಇಡೀ ಕಾರ್ಯಕ್ರಮದ ಸಂಪೂರ್ಣ ಉಸ್ತುವಾರಿ ಹಾಗೂ ಸಮನ್ವಯತೆಯ ಜವಾಬ್ದಾರಿಯನ್ನು ನಿರ್ವಹಿಸಬೇಕು. ಕಾರ್ಯಕ್ರಮದ ಸ್ಥಳ ನಿರ್ವಹಣೆ, ಪ್ರಶಸ್ತಿ ಪುರಸ್ಕೃತರ ಮತ್ತು ಗಣ್ಯರ ಆದರ ಸತ್ಕಾರ ಹಾಗೂ ಇಲಾಖೆಗಳ ನಡುವಿನ ಸಮನ್ವಯತೆಯನ್ನು ಕಂದಾಯ ಇಲಾಖೆ ವಹಿಸಿಕೊಳ್ಳಬೇಕು. ಪ್ರಶಸ್ತಿ ಪ್ರಧಾನ ಸಮಾರಂಭ ನಡೆಯುವ ಹಟ್ಟಿ ಗ್ರಾಮದ ರಸ್ತೆಗಳಲ್ಲಿರುವ ಗುಂಡಿಗಳನ್ನು ತಕ್ಷಣವೇ ಮುಚ್ಚಿ ದುರಸ್ತಿಗೊಳಿಸಬೇಕು. ಗ್ರಾಮ ಹಾಗೂ ಸಮಾರಂಭದ ಆವರಣದಲ್ಲಿ ಸಂಪೂರ್ಣ ನೈರ್ಮಲ್ಯ ಮತ್ತು ಶುಚಿತ್ವವನ್ನು ಕಾಪಾಡಲು ಪಂಚಾಯತ್ ರಾಜ್ ಇಲಾಖೆಗೆ ಸ್ಪಷ್ಟ ಸೂಚನೆ ನೀಡಲಾಗಿದ್ದು, ಕೊಪ್ಪಳ ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯತಿ ಪಿಡಿಒ ಅವರು ಗ್ರಾಮದ ಸಂಪೂರ್ಣ ಸ್ವಚ್ಛತೆಗೆ ಕ್ರಮ ವಹಿಸಬೇಕು.

ಕಾರ್ಯಕ್ರಮದ ಅವಧಿಯಲ್ಲಿ ಯಾವುದೇ ಕಾರಣಕ್ಕೂ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗದಂತೆ ನಿರಂತರ ಹಾಗೂ ತಡೆರಹಿತ ವಿದ್ಯುತ್ ಸರಬರಾಜನ್ನು ಜೆಸ್ಕಾಂ ಪೂರೈಸಬೇಕು ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಕಾರ್ಯಕ್ರಮದ ಮೆರವಣಿಗೆ, ಸಾಂಸ್ಕೃತಿಕ ಕಾರ್ಯಕ್ರಮ, ಡೊಳ್ಳು ಕುಣಿತ, ನಾಡಗೀತೆ, ನಿರೂಪಣೆ ಜವಾಬ್ದಾರಿಯನ್ನು ನಿರ್ವಹಿಸಬೇಕು. ವೇದಿಕೆ ಅಲಂಕಾರಕ್ಕೆ ತೋಟಗಾರಿಕೆ ಇಲಾಖೆಯಿಂದ ಹೂ ಕುಂಡಗಳನ್ನು ಒದಗಿಸಬೇಕು. ಪ್ರಶಸ್ತಿ ಸ್ವೀಕರಿಸುವ ಗ್ರಾಮಗಳೊಂದಿಗೆ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಮನ್ವಯ ಸಾಧಿಸಿ ಗ್ರಾಮದಿಂದ ಜನರನ್ನು ಕರೆ ತರುವ ಜವಾಬ್ದಾರಿ ನಿರ್ವಹಿಸಬೇಕು. ಕಾರ್ಯಕ್ರಮ ಮುಗಿಯುವುದು ತಡವಾಗುವುದ–ರಿಂದ ಕಾರ್ಯಕ್ರಮದ ನಂತರ ಬೇರೆ ಗ್ರಾಮದ ಜನರನ್ನು ಅವರ ಗ್ರಾಮಗಳಿಗೆ ತಲುಪಿಸಲು ಸಾರಿಗೆ ಇಲಾಖೆಯಿಂದ ಬಸ್‌ಗಳ ವ್ಯವಸ್ಥೆ ಕಲ್ಪಿಸಬೇಕು.

ವಾರ್ತಾ ಇಲಾಖೆಯು ಸಮಾರಂಭದ ಕುರಿತು ಪ್ರಚಾರ ಮಾಡುವುದರೊಂದಿಗೆ ಸಮಾರಂಭಕ್ಕೆ ಮಾಧ್ಯಮದವರನ್ನು ಕರೆದುಕೊಂಡು ಬರಬೇಕು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸಮಾರಂಭದ ಸ್ಥಳದಲ್ಲಿ ತುರ್ತು ವೈದ್ಯಕೀಯ ಸೌಲಭ್ಯ ಒದಗಿಸಬೇಕು. ಅಗ್ನಿಶಾಮಕ ಇಲಾಖೆಯು ತುರ್ತುಪರಿಸ್ಥಿತಿಗೆ ಸಿದ್ಧವಾಗಿರಬೇಕು. ಸಮಾರಂಭದ ವ್ಯವಸ್ಥಿತ ನಿರ್ವಹಣೆಗೆ ಪೊಲೀಸ್ ಇಲಾಖೆಯಿಂದ ಅಗತ್ಯ ಭದ್ರತೆ ಒದಗಿಸಬೇಕು ಎಂದು ಸಂಬಂಧಿಸಿದ ಇಲಾಖೆಗಳಿಗೆ ಅಧ್ಯಕ್ಷರು ಸೂಚಿಸಿದರು.

ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಮಾತನಾಡಿ, ನಮ್ಮ ಜಿಲ್ಲೆಯ ಹಟ್ಟಿ ಗ್ರಾಮ ಮಂಡಳಿಯ ಸಂಯಮ ಪ್ರಶಸ್ತಿಗೆ ಆಯ್ಕೆಯಾಗಿದ್ದು ಹೆಮ್ಮೆಯ ವಿಷಯ. ಈ ಮೂಲಕ ನಾವು ರಾಜ್ಯಕ್ಕೆ ಸಂದೇಶ ನೀಡುತ್ತಿದ್ದೇವೆ. ಈ ನಿಟ್ಟಿನಲ್ಲಿ ಮದ್ಯಮುಕ್ತ ಗ್ರಾಮಗಳನ್ನಾಗಿಸಲು ನಾವೆಲ್ಲರೂ ಮಾದರಿಯಾಗಿ ಕೆಲಸ ಮಾಡಬೇಕು. ಸಮಾರಂಭದ ವ್ಯವಸ್ಥಿತ ನಿರ್ವಹಣೆಗೆ ಅಧಿಕಾರಿಗಳೆಲ್ಲರೂ ಸಮನ್ವಯದಿಂದ ಕಾರ್ಯನಿರ್ವಹಿಸಿ, ಸಮಾರಂಭವನ್ನು ಯಶಸ್ವಿಗೊಳಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಮಂಡಳಿಯ ಕಾರ್ಯದರ್ಶಿ ಮಹೇಶ್ ಎನ್.ಎಸ್., ಹೆಚ್ಚುವರಿ ಪೊಲೀಸ್ ಅಧೀಕ್ಷಕ ಹೇಮಂತ್‌ಕುಮಾರ್, ಅಬಕಾರಿ ಡಿವೈಎಸ್‌ಪಿ ಶಾಂತೇಶ ಕಮತರ, ಗಾಂಧಿ ಬಳಗದ ಸದಸ್ಯರಾದ ಬಸವರಾಜ ಸವಡಿ, ಶಿವಪ್ಪ ಹಡಪದ, ರಾಜ–ಕುಮಾರ ಬಡಿಗೇರ, ಹಟ್ಟಿ ಗ್ರಾಮಸ್ಥರಾದ ರಾಮಣ್ಣ ಚೌಡ್ಕಿ, ಶಿವಣ್ಣ ಚರಾರಿ, ಸಾಹಿತಿಗಳಾದ ಸಾವಿತ್ರಿ ಮಜುಂದಾರ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಇತರರು ಉಪಸ್ಥಿತರಿದ್ದರು.

# ಶ್ರೀಧರಗಡ್ಡೆ ಗ್ರಾಮದ ಸಂಜೀವಪ್ಪ ಮೇದಾರರಿಗೆ ರಾಜ್ಯ ಉಪಾಧ್ಯಕ್ಷ ಹುದ್ದೆ

**ಅ.ಶ. ಸುದ್ದಿ ಬೆಂಗಳೂರು**

**ಬೆಂಗಳೂರು: ನಗರದ ಶಾಸಕರ ಭವನದ ಸಭಾಂಗಣದಲ್ಲಿ ಕರ್ನಾಟಕ ಮೇದ ಗಿರಿಜನಾಂಗ ಕಲ್ಯಾಣ ಸೇವಾ ಸಂಘದ ಪದಾಧಿಕಾರಿಗಳ ನೇಮಕಾತಿ ಹಾಗೂ ಪದಗ್ರಹಣ ಸಮಾರಂಭ ಶುಕ್ರವಾರ ನಡೆಯಿತು. ಸಮಾರಂಭದಲ್ಲಿ ಸಂಘದ ರಾಜ್ಯಾಧ್ಯಕ್ಷರಾಗಿ ಕಡೆಮನೆ ಎಸ್.ರವಿಕುಮಾರ್ ತುಮಕೂರು ಅವರು ಅಧಿಕಾರ ಸ್ವೀಕರಿಸಿದರು. ಇದೇ ವೇಳೆ ಬಳ್ಳಾರಿ ಜಿಲ್ಲೆಯ ಶ್ರೀಧರಗಡ್ಡೆ ಗ್ರಾಮದ ಸಂಜೀವಪ್ಪ ಮೇದಾರ ಅವರನ್ನು ಕರ್ನಾಟಕ ಮೇದ ಗಿರಿಜನಾಂಗ ಕಲ್ಯಾಣ ಸೇವಾ ಸಂಘದ ರಾಜ್ಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಿ ಪದಗ್ರಹಣ ಮಾಡಿಸಲಾಯಿತು.**




ರಾಜ್ಯ ಉಪಾಧ್ಯಕ್ಷರಾಗಿ ನೇಮಕಗೊಂಡಿರುವ ಶ್ರೀಧರಗಡ್ಡೆ ಸಂಜೀವಪ್ಪ ಮೇದಾರ ಅವರು ಸಮಾಜಸೇವೆ ಹಾಗೂ ಸಂಘಟನಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು, ಮೇದಾರ ಸಮುದಾಯದ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂಬ ವಿಶ್ವಾಸವನ್ನು ಸಂಘದ ಮುಖಂಡರು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸಿರಿಗೇರಿ ಗ್ರಾಮದ ಸ್ವಾಮಿ ಮೇದಾರ, ಶ್ರೀಧರಗಡ್ಡೆ ಗ್ರಾಮದ ನಾಗೇಶಪ್ಪ ಮೇದಾರ, ಎನ್. ಬಸವರಾಜ ಮೇದಾರ, ಸಣ್ಣ ಗಂಗಪ್ಪ ಮೇದಾರ ಸೇರಿದಂತೆ ಸಂಘದ ಪದಾಧಿಕಾ–ರಿಗಳು ಸಮುದಾಯದ ಮುಖಂಡರು ಹಾಗೂ ಬಂಧು–ಮಿತ್ರರು ಸಂಜೀವಪ್ಪ ಮೇದಾರ ಅವರನ್ನು ಅಭಿನಂದಿಸಿ, ಹೊಸ ಜವಾಬ್ದಾ–ರಿಯನ್ನು ಯಶಸ್ವಿಯಾಗಿ ನಿರ್ವಹಿಸಿ ಸಮಾಜದ ಅಭಿವೃದ್ಧಿಗೆ ಹೆಚ್ಚಿನ ಕೊಡುಗೆ ನೀಡುವಂತಾಗಲಿ ಎಂದು ಶುಭ ಹಾರೈಸಿದರು.

# ತರಲಕಟ್ಟಿ ಗ್ರಾಮಸ್ಥರಿಂದ ಕ್ಯಾಬಿನೆಟ್ ದರ್ಜೆ ಸಚಿವ ಬಸವರಾಜ ರಾಯರೆಡ್ಡಿ ಅವರಿಗೆ ಅದ್ದೂರಿ ಸನ್ಮಾನ

**ಅ.ಶ. ಸುದ್ದಿ ಕೊಪ್ಪಳ**

**ಕೊಪ್ಪಳ: ನೂತನವಾಗಿ ಕ್ಯಾಬಿನೆಟ್ ದರ್ಜೆಯ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಸನ್ಮಾನ್ಯ ಶ್ರೀ ಬಸವರಾಜ ರಾಯರೆಡ್ಡಿ ಅವರಿಗೆ ತರಲಕಟ್ಟಿ ಗ್ರಾಮದ ಗ್ರಾಮಸ್ಥರು ಆತ್ಮೀಯ ಹಾಗೂ ಅದ್ದೂರಿ ಸನ್ಮಾನ ಸಲ್ಲಿಸಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರು ಸಚಿವರಿಗೆ ಶಾಲು ಹೊದಿಸಿ, ಪುಷ್ಪಗುಚ್ಛ ನೀಡಿ ಗೌರವಿಸಿ, ಸಚಿವ ಸ್ಥಾನಕ್ಕೆ ಆಯ್ಕೆಯಾಗಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು.**

ರಾಜ್ಯದ ಅಭಿವೃದ್ಧಿ, ಜನಪರ ಆಡಳಿತ ಹಾಗೂ ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿ ಕೆಲಸ ಮಾಡುವಂತೆ ಮನವಿ ಸಲ್ಲಿಸಿದರು. ಸನ್ಮಾನ ಸ್ವೀಕರಿಸಿದ ಸಚಿವ ಬಸವರಾಜ ರೆಡ್ಡಿ ಅವರು



ಗ್ರಾಮಸ್ಥರ ಪ್ರೀತಿ, ವಿಶ್ವಾಸ ಮತ್ತು ಆಶೀರ್ವಾದಕ್ಕೆ ಕೃತಜ್ಞತೆ ಸಲ್ಲಿಸಿ, ಜನರ ನಿರೀಕ್ಷೆಗಳಿಗೆ ತಕ್ಕಂತೆ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವುದಾಗಿ ಭರವಸೆ ನೀಡಿದರು. ರಾಜ್ಯದ ಸಮಗ್ರ ಅಭಿವೃದ್ಧಿಯೊಂದಿಗೆ ಗ್ರಾಮೀಣ ಮೂಲಸೌಕರ್ಯ, ಶಿಕ್ಷಣ, ಕುಡಿಯುವ ನೀರು, ರಸ್ತೆ, ಕೃಷಿ ಹಾಗೂ ಸಾರ್ವಜನಿಕ ಕಲ್ಯಾಣ ಯೋಜನೆಗಳಿಗೆ ಹೆಚ್ಚಿನ ಒತ್ತು ನೀಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಅಪಾರ ಸರ್ಕಾರಿ ವಕೀಲರಾದ ಮಲ್ಲನಗೌಡ ಪಾಟೀಲ್, ತೇಜನಗೌಡ ಪೊಲೀಸ್ ಪಾಟೀಲ್, ಯಮನೂರಪ್ಪ ಕಂಬಳಿ, ಪ್ರಕಾಶ್ ಮಾಲಿ ಪಾಟೀಲ್, ಯಮನೂರಪ್ಪ ತಳವಾರ. ಶರಣಪ್ಪ ಕಂಬಳಿ. ಸೇರಿದಂತೆ ಗ್ರಾಮದ ಅನೇಕ ಮುಖಂಡರು, ಹಿರಿಯರು, ಯುವಕರು ಹಾಗೂ ಸಾರ್ವಜನಿಕರು ಉಪಸ್ಥಿತ–ರಿದ್ದು, ಸಚಿವರಿಗೆ ಶುಭಾಶಯ ಕೋರಿದರು.

ಕಾರ್ಯಕ್ರಮವು ಆತ್ಮೀಯ ವಾತಾವರಣದಲ್ಲಿ ನಡೆಯಿತು. ಗ್ರಾಮಸ್ಥರು ಸಚಿವರೊಂದಿಗೆ ಸಂವಾದ ನಡೆಸಿ, ಗ್ರಾಮದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಕು–ರಿತು ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಗ್ರಾಮದ ಅಭಿವೃದ್ಧಿಗೆ ಅಗತ್ಯ ಸಹಕಾರ ನೀಡುವಂತೆ ಸಚಿವರನ್ನು ವಿನಂತಿಸಲಾಯಿತು.

# ಸೆ 20 ರಂದು ನಡೆಯುವ ಪಂಚಮಸಾಲಿ ಸಮಾಜ ಸಂಘದ ಅಧಿಕೃತ ಸಭೆಗೆ ಕರೆ



**ಅ.ಶ. ಸುದ್ದಿ ಕೊಪ್ಪಳ**

**ಕೊಪ್ಪಳ: ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘ ರಾಜ್ಯ ಘಟಕದ ವತಿಯಿಂದ ಸಂಘದ ರಾಜ್ಯಮಟ್ಟದ ಸಾಮಾನ್ಯ ಸಭೆ ಬರುವ ಸೆ. 20ರ ರವಿವಾರ ಬೆಳಿಗ್ಗೆ 10 ಗಂಟೆಗೆ ಶಿವಮೊಗ್ಗ ರಸ್ತೆ ಹರಿಹರ ನಗರದ ಹೆಚ್ ಕೆ. ವೀರಪ್ಪ ಸಭಾ ಭವನದಲ್ಲಿ ಜರುಗಲಿದೆ ಎಂದು ಸಂಘದ ರಾಜ್ಯ ಅಧ್ಯಕ್ಷರಾದ ಸೋಮನ ಗೌಡ ಎಂ ಮಾಲಿಪಾಟೀಲ್ ರವರು ತಿಳಿಸಿದ್ದಾರೆ.**

ಅವರು ಶುಕ್ರವಾರ ಇಲ್ಲಿನ ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಸಂಘದ ಪತ್ರಿಕಾ ಭವನದಲ್ಲಿ ಏರ್ಪಡಿಸಿದ ಸುದ್ದಿಗೋಷ್ಠಿಯಲ್ಲಿ ಮಾಧ್ಯಮದೊಂದಿಗೆ ಮಾತನಾಡಿ ಸಂಘದ ಉಚ್ಚಾಟಿತ ಪ್ರಧಾನ ಕಾರ್ಯದರ್ಶಿಯವರು ಆಗಸ್ಟ್ 9 ರಂದು ಕರೆದಿರುವ ಸಭೆ ಸಮಂಜಸವಲ್ಲ ಮತ್ತು ಅದು ಕಾಯ್ದೆ ಕ್ರಮವು ಅಲ್ಲ ಎಂದು ಸ್ಪಷ್ಟಪಡಿಸಿದರು. ಕಾರ್ಯಕಾರಿ ಸಮಿತಿ ಸಭೆ ಕರೆಯಲು ರಾಜ್ಯ ಅಧ್ಯಕ್ಷರ ಅನುಮತಿ ಕಡ್ಡಾಯ ಅನುಮತಿ ಇಲ್ಲದೆ ಕರೆಯುವ ಸಭೆ ಕಾನೂನುಬಾಹಿರ ವಾಗಿರುತ್ತದೆ ಎಂದು ತಿಳಿಸಿದ ಅವರು ಸದರಿ ಅನಧಿಕೃತ ಸಭೆಗೆ ಸಮಾಜದ ಸದಸ್ಯರು ಪದಾಧಿಕಾರಿಗಳು ಯಾರು ಕೂಡ ಭಾಗವಹಿಸಬಾರದು ಎಂದು ಸ್ಪಷ್ಟಪಡಿಸಿದರು, ಸಂಘದಲ್ಲಿ ಸುಮಾರು 48 ಕೋಟಿ ವ್ಯವಹಾರ ನಡೆದಿದೆ ಲೆಕ್ಕಪತ್ರಗಳು ಸಭೆಯಲ್ಲಿ ಮಾಹಿತಿ ನೀಡಬೇಕು,

ಸಂಘದಲ್ಲಿ ಪೀಠದಲ್ಲಿ ಗೊಂದಲ ಸೃಷ್ಟಿಸುವವರನ್ನು ಯಾರೇ ಆಗಿರಲಿ ಅವ–ರಿಗೆ ಸಂಘದಲ್ಲಿ ಮುಂದುವರಿಯಲು ಅವಕಾಶ ನೀಡುವುದಿಲ್ಲ, ರಾಜ್ಯದಲ್ಲಿ ಸುಮಾರು 80 ಲಕ್ಷ ಜನ ಪಂಚಮಸಾಲಿ ಸಮಾಜ ಬಾಂಧವರು ಇದ್ದಾರೆ ಅವರೆಲ್ಲರನ್ನು ಒಗ್ಗೂಡಿಸಿ ಸಂಘ ಬೆಳೆಸುವ ನಿಟ್ಟಿನಲ್ಲಿ ಬರುವ ಸೆಪ್ಟೆಂಬರ್ 20 ರಂದು ಸಂಘದ ಸಾಮಾನ್ಯ ಸಭೆ ಕರೆಯಲಾಗಿದೆ ಅಂದಿನ ಸಭೆಗೆ ತಪ್ಪದೆ ಎಲ್ಲರೂ ಭಾಗವಹಿಸಬೇಕು, ಸಂಘದ ಸದಸ್ಯತ್ವ ಅಭಿಯಾನ ಚಾಲ್ತಿಯಲ್ಲಿದ್ದು ಸಮಾಜದ ಎಲ್ಲರೂ ಸಂಘದ ಸದಸ್ಯತ್ವ ಹೊಂದಲು ಮನವಿ ಮಾಡಿದರು ಹಾಗೂ ಸಾಮಾನ್ಯ ಸಭೆಯ ದಿನಾಂಕ ನಿಗದಿಯಾಗಿದ್ದು ಸಂಘದ ಬೈಲಾ ದಲ್ಲಿ ಏನಾದರೂ ತಿದ್ದುಪಡಿಗಳನ್ನು ತರಲು ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕು.

ಎಂದು ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ರಾಜ್ಯ ಅಧ್ಯಕ್ಷರಾದ ಸೋಮನ ಗೌಡ ಎಂ ಮಾಲಿಪಾಟೀಲ್ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಶಂಕರ್ ಗೌಡ ಪಾಟೀಲ್, ಜಿಲ್ಲಾ ಅಧ್ಯಕ್ಷ ಬಸವನಗೌಡ ತೊಂಡಿಹಾಳ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದೇವರಾಜ ಹಾಲಸಮುದ್ರ ಮತ್ತಿತರರು ಉಪಸ್ಥಿತರಿದ್ದರು.

# ಜಾನಪದ ಪರಂಪರೆ ಉಳಿಸಿ ಬೆಳೆಸುವುದು ನಮ್ಮೆಲ್ಲರ ಹೊಣೆ: ಡಾ. ಗೊಲ್ಲಹಳ್ಳಿ ಶಿವಪ್ರಸಾದ

**ಅ.ಶ. ಸುದ್ದಿ ಕುಕನೂರು**

**ಕುಕನೂರು: ಜಾನಪದ ಕಲೆಗಳು ಅನೇಕ ಸಂಕಷ್ಟಗಳನ್ನು ಮೆಟ್ಟಿ ಇಂದಿಗೂ ಸಮಾಜದಲ್ಲಿ ಗಟ್ಟಿಯಾಗಿ ಉಳಿದಿವೆ. ನಮ್ಮ ಹಿರಿಯರು ಅಮೂಲ್ಯವಾದ ಜಾನಪದ ಪರಂಪರೆಯನ್ನು ನಮಗೆ ಕೊಟ್ಟು ಹೋಗಿದ್ದು, ಅದನ್ನು ಉಳಿಸಿ ಬೆಳೆಸಿ ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಡಾ. ಗೊಲ್ಲಹಳ್ಳಿ ಶಿವಪ್ರಸಾದ ಹೇಳಿದರು.**

ಅವರು ಪಟ್ಟಣದ ಅನ್ನದಾನೇಶ್ವರ ಶಾಖಾ ಮಠದ ಆವರಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಹಾಗೂ ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ "ಜ್ಯೋತಿ ಆಗು ಜಗಕ್ಕೆಲ್ಲ ? ಜ್ಞಾನಪದ ಬೆಳಗು" ಹಾಡುಗಳ ಜಾನಪದ ವೈಭವ ಕಾರ್ಯಕ್ರಮದಲ್ಲಿ ಮಾತನಾಡಿ ಜಾನಪದ ಕಲೆ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸುವ ಮೂಲಕ ನಮ್ಮ ನಾಡಿನ ಸಾಂಸ್ಕೃತಿಕ ಶ್ರೀಮಂತಿ–ಕೆಯನ್ನು ಉಳಿಸಿಕೊಳ್ಳಬೇಕು ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣಕುಮಾರ್ ವಹಿಸಿ ಮಾತನಾಡಿ, ಜಾನಪದ ಕಲೆ ಮತ್ತು ಸಂಸ್ಕೃತಿಯು ನಮ್ಮ ಸಮಾಜದ ಜೀವನಾಡಿಯಾಗಿದೆ.

ಇಂತಹ ಕಾರ್ಯಕ್ರಮಗಳ ಮೂಲಕ ಯುವ ಪೀಳಿಗೆಗೆ ಜಾನಪದ ಪರಂಪರೆಯ ಮಹತ್ವವನ್ನು ಪರಿಚಯಿಸುವುದು ಇಲಾಖೆಯ ಪ್ರಮುಖ ಉದ್ದೇಶವಾಗಿದೆ. ಜಾನಪದ ಕಲಾವಿದರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಸರ್ಕಾರ ಹಾಗೂ ಇಲಾಖೆ ನಿರಂತರವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ಹೇಳಿದರು. ಮುಂಡರಗಿ ಅನ್ನದಾನೇಶ್ವರ ಶಾಖಾ ಮಠದ ಡಾ. ಮಹಾದೇವ ಸ್ವಾಮೀಜಿ ಮಾತನಾಡಿ, ಭಜನಾ ಹಾಗೂ ಜಾನಪದ ಕಲಾವಿದರನ್ನು ಸರ್ಕಾರ ಗುರುತಿಸಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕು.

ಜಾನಪದ ಕಲಾವಿದರಿಗಾಗಿ ಜೀವ ವಿಮೆ ಯೋಜನೆಯನ್ನು ಜಾರಿಗೊಳಿಸಿ ಅವರ ಜೀವನ ಭದ್ರತೆಗೆ ವಿಶೇಷ ಕ್ರಮ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಇನ್ನಷ್ಟು ಪರಿಣಾಮಕಾರಿ ಪ್ರಯತ್ನಗಳನ್ನು ನಡೆಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು. ಸಮಾಜ ಸೇವಕ ಕಳಕಪ್ಪ ಕಂಬಳಿ ಮಾತನಾಡಿ, ಜಾನಪದ ಕಲೆಗಳು ನಮ್ಮ ಸಂಸ್ಕೃತಿ ಮತ್ತು ಜೀವನ ಮೌಲ್ಯಗಳ ಪ್ರತೀಕವಾಗಿವೆ. ಆಧುನಿಕತೆಯ ನಡುವೆಯೂ ಜಾನಪದ ಪರಂಪರೆಯನ್ನು ಉಳಿಸಿ




ಬೆಳೆಸುವ ಜವಾಬ್ದಾರಿ ಸಮಾಜದ ಪ್ರತಿಯೊಬ್ಬರ ಮೇಲಿದೆ. ಗ್ರಾಮೀಣ ಭಾಗಗಳಲ್ಲಿರುವ ಪ್ರತಿಭಾವಂತ ಜಾನಪದ ಕಲಾವಿದರಿಗೆ ಸರ್ಕಾರ ಹಾಗೂ ಸಂಘ–ಸಂಸ್ಥೆಗಳು ಹೆಚ್ಚಿನ ಪ್ರೋತ್ಸಾಹ ಮತ್ತು ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು ಎಂದು ಹೇಳಿದರು. ಕರ್ನಾಟಕ ಜಾನಪದ ಅಕಾಡೆಮಿ ರಿಜಿಸ್ಟ್ರಾರ್ ಎನ್. ನಮ್ರತಾ ಅವರು ಮಾತನಾಡಿ, ಜಾಗತೀಕರಣದ ಈ ಕಾಲಘಟ್ಟದಲ್ಲಿ ಜಾನಪದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಇನ್ನಷ್ಟು ಮಹತ್ವ ಪಡೆದುಕೊಂಡಿದೆ.

ನಮ್ಮ ನೆಲದ ಸಂಸ್ಕೃತಿ, ಪರಂಪರೆ ಹಾಗೂ ಜೀವನ ಮೌಲ್ಯಗಳನ್ನು ಉಳಿಸುವಲ್ಲಿ ಜಾನಪದದ ಪಾತ್ರ ಅಪಾರವಾಗಿದೆ. ಆದ–ರಿಂದ ಜಾನಪದ ಕಲೆಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಪರಿಚಯಿಸುವ ಕೆಲಸಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಹೇಳಿದರು. ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಹಾಗೂ ಕಾರ್ಯಕ್ರಮದ ಸಂಚಾಲಕರಾದ ಡಾ. ಜೀವನಸಾಬ್ ವಾಲಿಕಾರ ಬಿನ್ನಾಳ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಜಾನಪದ ಕಲೆ ಮತ್ತು ಸಂಸ್ಕೃತಿ ನಮ್ಮ ನಾಡಿನ ಅಮೂಲ್ಯ ಪರಂಪರೆಯಾಗಿದ್ದು, ಅದರ ಸಂರಕ್ಷಣೆ ಹಾಗೂ ಮುಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಜಾನಪದ ಕಲಾವಿದರಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಮೂಲಕ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಮತ್ತಷ್ಟು ಸಮೃದ್ಧಗೊಳಿಸಬೇಕಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ವಿವಿಧ ಜಾನಪದ ಕಲಾ ತಂಡಗಳ ಪ್ರದರ್ಶನ ಪ್ರೇಕ್ಷಕರ ಮನಸೂರೆಗೊಂಡವು. ಶರಣಪ್ಪ ಚಳ್ಳಮರದ ಮತ್ತು ತಂಡ ಗೀಗಿ ಪದಗಳನ್ನು, ದೇವಪ್ಪ ಮುತ್ತಾಳ ಮತ್ತು ತಂಡ ಭಜನಾ ಪದಗಳನ್ನು, ಮುದುಕವ್ವ ಮಾದರ ಮತ್ತು ತಂಡ ಗೀಗಿ ಪದಗಳನ್ನು, ತಿಪ್ಪಣ್ಣ ಅಂಬಾಜಿ ಸುಗತೇಕರ್ ಮತ್ತು ತಂಡ ಗೊಂದಲಿಗರ ಹಾಡುಗಳನ್ನು, ಯುವರಾಜ ಹಿರೇಮಠ ಮತ್ತು ತಂಡ ಜನಪದ ಗೀತೆಗಳನ್ನು, ರಾಚಮ್ಮ ನಿಂಗಾಪುರ ಮತ್ತು ತಂಡ ಸೋಬಾನೆ ಪದಗಳನ್ನು ಹಾಗೂ ಕವಿತಾ ಚೋಳಿನ ಮತ್ತು ತಂಡ ಸಂಪ್ರದಾಯದ ಪದಗಳನ್ನು ಪ್ರಸ್ತುತಪಡಿಸಿ ಮೆಚ್ಚುಗೆ ಗಳಿಸಿದರು.

ವೇದಿಕೆಯಲ್ಲಿ ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಲೀಲಾವತಿ ಮುಧೋಳ, ಉಪಾಧ್ಯಕ್ಷೆ ಮಂಜುಳಾ ಕಲ್ಮನಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಈರಪ್ಪ ಕುಡಗುಂಟಿ, ಕರ್ನಾಟಕ ಜಾನಪದ ಪರಿಷತ್ ಜಿಲ್ಲಾ ಅಧ್ಯಕ್ಷ ಶರಣಪ್ಪ ವಡಗೇರಿ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಮಹಿಬೂಬ್‌ಸಾಬ್ ಕಿಲ್ಲೇದಾರ್, ಸಾಹಿತಿ ಕೆ. ಬಿ. ಬ್ಯಾಳಿ, ತತ್ವಪದಕಾರ ಹಾಗೂ ಸಾಹಿತಿ ಆರ್. ಪಿ. ರಾಜೂರ, ಕಲಾವಿದ ಶರಣಯ್ಯ ಇಟಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಇದೇ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಉತ್ತಮ ಪ್ರಶಸ್ತಿ ಪತ್ರ ಕರ್ತ ಪ್ರಶಸ್ತಿ ಪಡೆದ ರುದ್ರಪ್ಪ ಭಂಡಾರಿ ಹಾಗೂ ಬಸವರಾಜ ಕೊಡ್ಲಿ ಅವರನ್ನು ಸತ್ಕರಿಸಲಾಯಿತು. ಜಾನಪದ ಕಲಾವಿದರು, ಸಾರ್ವಜನಿಕರು ಹಾಗೂ ಕಲಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮಕ್ಕೂ ಮುನ್ನ ಶಿರೂರು ವೀರಭದ್ರಪ್ಪ ವೃತ್ತದಿಂದ ಅನ್ನದಾನೇಶ್ವರ ಶಾಖಾ ಮಠದವರೆಗೆ ವಿವಿಧ ಜಾನಪದ ಕಲಾತಂಡಗಳೊಂದಿಗೆ ಗವರ್ಣರಂಜಿತ ಮೆರವಣಿಗೆ ನಡೆಯಿತು. ಡೊಳ್ಳು, ತಮಟೆ ಸೇರಿದಂತೆ ಸಾಂಪ್ರದಾಯಿಕ ವಾದ್ಯಗಳ ನಾದಕ್ಕೆ ಕಲಾವಿದರು ಹೆಜ್ಜೆ ಹಾಕಿದರೆ, ಜಾನಪದ ವೇಷಭೂಷಣಗಳು ಮೆರವಣಿಗೆಯ ಮೆರುಗು ಹೆಚ್ಚಿಸಿದವು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka